ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ



# ಗ್ರಾಮೋದಯ

ತ್ರೈಮಾಸಿಕ ಪತ್ರಿಕೆ

ಸಂಪುಟ-1 Vol-1 | ಸಂಚಿಕೆ-11 Issue-11 | ಜುಲೈ-ಸೆಪ್ಟೆಂಬರ್ 2023 July-September - 2023 | ಪುಟಗಳು-36 Pages-36




## ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ : ಕರ್ನಾಟಕದಲ್ಲಿ ಪಂಚಾಯತಿಯಗಳು ನಡೆದು ಬಂದ ಹಾದಿ

## "ರಾಷ್ಟ್ರೀಯ ವಿಚಾರ ಸಂಕಿರ್ಣ"

"ಗ್ರಾಮೀಣ ಪರಿವರ್ತನೆಯೇ ನಮ್ಮ ಸಂಕಲ್ಪ"



77ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಿಶ್ವವಿದ್ಯಾಲಯದಲ್ಲಿ
ನಿವೃತ್ತ ಸೈನಿಕರಾದ ಸುಬೇದಾರ್ ಚನ್ನವೀರಪ್ಪ ಸೊನ್ನದ ಅವರಿಗೆ ಸನ್ಮಾನಿಸಲಾಯಿತು.





ಮಾನ್ಯಶ್ರೀ ಬಸವರಾಜ ಹೊರಟ್ಟಿ ವಿಧಾನ ಪರಿಷತ್ ಸಭಾಪತಿಗಳು
ಹಾಗೂ ಮಾನ್ಯ ಶ್ರೀ ಎಚ್. ಕೆ. ಪಾಟೀಲ ಗದಗ ಜಿಲ್ಲೆ ಉಸ್ತುವಾರಿ ಸಚಿವರು
ಸಬರಮತಿ ಆಶ್ರಮಕ್ಕೆ ಭೇಟಿ ನೀಡಿರುವ ಸಂದರ್ಭ.

# ಪರಿವಿಡಿ


4 ಸಂಪಾದಕೀಯ

5 ಕುಲಪತಿಗಳ ನುಡಿ

6 ಕುಲಸಚಿವರ ಆಶಯ

7 ಹಣಕಾಸು ಅಧಿಕಾರಿಗಳ ಮನದಾಳದ ಮಾತು

8 ವಿಶೇಷ ಲೇಖನ
"ಆತ್ಮಹತ್ಯೆ ತಡೆಗಟ್ಟುವಿಕೆ ಪ್ರಯತ್ನಗಳು ಮತ್ತು ಸವಾಲುಗಳು"
ಶ್ರೀ ಅಶೋಕ ಕೋರಿ

12 ವಿಶೇಷ ಸಮಾವೇಶ
"ಗ್ರಾಮ ಸ್ವರಾಜ ಮತ್ತು ಪಂಚಾಯತ್ ರಾಜ್ : ಕರ್ನಾಟಕದಲ್ಲಿ ಪಂಚಾಯತಿಗಳು ನಡೆದು ಬಂದ ಹಾದಿ"
ಡಾ. ಸಂತೋಷಕುಮಾರ ಪಿ. ಕೆ.

14 ವಿಶೇಷ ಕಾರ್ಯಾಗಾರ
ಡಾ॥ ಬಾಬಾಸಾಹೇಬ ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನರಾಮ್‌ರವರ ಜಯಂತ್ಯೋತ್ಸವದ ಅಂಗವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನ ಕಾರ್ಯಾಗಾರ
ಡಾ. ಶ್ರೀಧರ ಹಾದಿಮನಿ

17 ಲೇಖನ
ಗ್ರಾಮಗಳಲ್ಲಿ ಆರೋಗ್ಯದ ಸ್ಥಿತಿಗತಿ ಮತ್ತು ಸುಧಾರಣಾ ಕ್ರಮಗಳು
ಕುಮಾರಿ ಮಮತಾ ಚಂದ್ರಪ್ಪ ಹರಿಜನ

21 ಲೇಖನ
ಭಾರತದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಖಾದಿಯ ಪಾತ್ರ
ಕು. ಶರಣಬಸವ ನಿಂಗಯ್ಯ ದಂಡಿನ

24 ಲೇಖನ
ಸಸ್ಯ ಸಂಜೀವಿನಿ – ಅರಿಶಿಣ
ಶ್ರೀ ಲಿಂಗರಾಜು ನಿಡುವಣಿ

26 ವಿಶ್ವವಿದ್ಯಾಲಯದ ಚಟುವಟಿಕೆಗಳು


**ಸೂಚನೆ :**
ಲೇಖನಗಳನ್ನು ಪ್ರಕಟಣೆಗಾಗಿ ಆಯ್ಕೆ ಮಾಡುವ ಹಾಗೂ ಪ್ರಕಟಿಸುವ ಸೂಕ್ತ ಸಮಯದ ನಿರ್ಧಾರ ಸಂಪಾದಕರಿಗೆ ಸೇರಿರುತ್ತದೆ. ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸಂಪಾದಕ ಮಂಡಳಿಯ ಅಭಿಪ್ರಾಯವಲ್ಲ. ಈ ಆವೃತ್ತಿಯು ಮಾರಾಟಕ್ಕಿಲ್ಲ ದೂರವಾಣಿ: (08372) 200923, ಇಮೇಲ್–gramodayaksrdpru@gmail.com

## ಸಂಪಾದಕೀಯ

**ಗೌರವಾನ್ವಿತರಿಗೆ,**

ನಮ್ಮ ದೇಶದ 73ನೇ ಸಂವಿಧಾನ ತಿದ್ದುಪಡಿಯು ಒಂದು ಅವಿಸ್ಮರಣೀಯ ವಿಷಯವಾಗಿದೆ. ಈ ತಿದ್ದುಪಡಿಯ ಮೂಲ ಉದ್ದೇಶ ಅಧಿಕಾರ ವಿಕೇಂದ್ರೀಕರಣವಾಗಿದ್ದು, ಕರ್ನಾಟಕ ರಾಜ್ಯವು ಈ ತಿದ್ದುಪಡಿಯನ್ನು ಅನುಸರಿಸಿ, ಅನುಷ್ಠಾನಗೊಳಿಸಿದ ಕೆಲವೇ ರಾಜ್ಯಗಳಲ್ಲಿ ಒಂದಾಗಿದೆ. ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಕಾನೂನು ಗ್ರಾಮೀಣ ಜೀವನದ ಮೌಲ್ಯಗಳನ್ನು ಹೆಚ್ಚಿಸಿ, ಗ್ರಾಮದಿಂದ ರಾಷ್ಟ್ರ ಬೆಳವಣಿಗೆಯು ಆಡಳಿತ ವಿಕೇಂದ್ರಿಕರಣದಿಂದ ಮಾತ್ರ ಸಾಧ್ಯವಾಗಿದೆ. ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿ ಹಾಗೂ ಅನುಷ್ಠಾನದ 30 ವರ್ಷಗಳ ವರ್ಷಾಚರಣೆ ಅಂಗವಾಗಿ ವಿಶ್ವವಿದ್ಯಾಲಯದಲ್ಲಿ "ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್: ಕರ್ನಾಟಕದಲ್ಲಿ ಪಂಚಾಯತಿಗಳು ನಡೆದು ಬಂದ ದಾರಿ, ಎದುರಿಸುತ್ತಿರುವ ಸವಾಲುಗಳು ಹಾಗೂ ಹಲವಾರು ಕ್ಷೇತ್ರಗಳಲ್ಲಿ ಬದಲಾವಣೆಯ ಅವಶ್ಯಕತೆ"ಯ ಬಗ್ಗೆ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಈ ಸಂಚಿಕೆಯ ವಿಶೇಷತೆಯಾಗಿರುತ್ತದೆ. ಅಲ್ಲದೇ ಆತ್ಮಹತ್ಯೆ ತಡೆಗಟ್ಟುವಿಕೆ: ಪ್ರಯತ್ನಗಳು ಮತ್ತು ಸವಾಲುಗಳ ಬಗ್ಗೆ ವಿಶೇಷ ಲೇಖನವನ್ನು ಪ್ರಕಟಿಸುತ್ತಿದ್ದೇವೆ.

ವಿಶ್ವವಿದ್ಯಾಲಯದ ಸ್ನಾತಕ ಪದವಿ ಕಾರ್ಯಕ್ರಮಗಳು ಪ್ರಾರಂಭವಾಗಿದ್ದು, ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕಾಗಿ ಬಂದಿರುವ ಎಲ್ಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸ್ವಾಗತ, ಅಭಿನಂದನೆಗಳು ಹಾಗೂ ಶುಭವಾಗಲಿ.

ಪ್ರಸ್ತುತ 'ಗ್ರಾಮೋದಯ' ಸಂಚಿಕೆಯ ಸಂಕಲನಕ್ಕೆ ಅನುವು ಮಾಡಿಕೊಟ್ಟ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಗೆ, ಕುಲಸಚಿವರಿಗೆ, ವಿತ್ತಾಧಿಕಾರಿಗಳಿಗೆ ನನ್ನ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಂಪಾದಕೀಯ ಮಂಡಳಿ ಹಾಗೂ ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳಿಗೆ, ಲೇಖಕರಿಗೆ ಹಾಗೂ ವಿನ್ಯಾಸ ರಚಿಸಿ ಮತ್ತು ಅಂದವಾಗಿ ಮುದ್ರಿಸಿದ ಮೆ॥ ವಿಜಯರಾಜ್ ಎಂಟರ್‌ಪ್ರೈಜಿಸ್ & ಪಬ್ಲಿಕೇಶನ್, ಗದಗ ಇವರಿಗೆ ನಾನು ಚಿರಋಣಿಯಾಗಿದ್ದೇನೆ.

**ಡಾ. ಅಬ್ದುಲ್ ಅಜೀಜ್ ಮುಲ್ಲಾ**
ಪ್ರಧಾನ ಸಂಪಾದಕರು


## ಸಂಪಾದಕೀಯ ಮಂಡಳಿ :



**ಅಧ್ಯಕ್ಷರು:**
ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ
ಕುಲಸಚಿವರು



**ಪ್ರಧಾನ ಸಂಪಾದಕರು:**
ಡಾ. ಅಬ್ದುಲ್ ಅಜೀಜ್ ಮುಲ್ಲಾ
ಸಹಾಯಕ ನಿರ್ದೇಶಕರು,
ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



**ಸದಸ್ಯರು**
ಶ್ರೀ ಆನಂದಗೌಡ ಪಿ. ಫಕೀರಗೌಡ
ಸಹಾಯಕ ಗ್ರಂಥಪಾಲಕರು



**ಸದಸ್ಯರು**
ಶ್ರೀ ಚಂದ್ರಪ್ಪ ಬಾರಂಗಿ
ಕನ್ನಡ ಅಧ್ಯಾಪಕರು



**ಸದಸ್ಯರು**
ಡಾ. ಸಂಜಯಕುಮಾರ ಶಿ. ಹಾರೋಬಿಡಿ
ಸಂಯೋಜಕರು, ತರಬೇತಿ ಪ್ರಕಟಣೆ ಹಾಗೂ
ಮೇಲ್ವಿಚಾರಣೆ ಕೇಂದ್ರ



**ಸದಸ್ಯ ಕಾರ್ಯದರ್ಶಿ**
ಕು. ರಾಧಿಕಾ ಕೆ. ಆರ್.

## ಸಲಹಾ ಮಂಡಳಿ :

ಶ್ರೀ ಗಿರೀಶ್ ದೀಕ್ಷಿತ್
ಸಹಾಯಕ ನಿರ್ದೇಶಕರು, ಸಂಶೋಧನೆ,
ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ

ಡಾ. ಶ್ರೀಧರ ಹಾದಿಮನಿ
ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್,
ಕಾರ್ಯಕ್ರಮ ಸಂಯೋಜಕರು

ಶ್ರೀ ಎಂ. ಬಿ. ಚನ್ನಪ್ಪಗೌಡರ,
ಕುಲಪತಿಗಳ ವಿಶೇಷಾಧಿಕಾರಿಗಳು

ಡಾ. ಸಾವಿತ್ರಿ ಬ್ಯಾಡಗಿ
ಎಂ.ಎಸ್ಸಿ. ಆಹಾರ ವಿಜ್ಞಾನ ಮತ್ತು
ತಂತ್ರಜ್ಞಾನ, ಕಾರ್ಯಕ್ರಮ ಸಂಯೋಜಕರು

ಶ್ರೀ ಪ್ರವೀಣ ಅಂಕಲಕೋಟಿ
ಎಂ.ಎ. ಸಾರ್ವಜನಿಕ ಆಡಳಿತ,
ಕಾರ್ಯಕ್ರಮ ಸಂಯೋಜಕರು

ಡಾ. ಅಭಯಕುಮಾರ ಗಸ್ತಿ
ಎಂ.ಕಾಂ., ಕಾರ್ಯಕ್ರಮ ಸಂಯೋಜಕರು

ಡಾ. ನೀಲಮ್ಮ ಆರ್. ಕೊಲಗೇರಿ
ಎಂ.ಬಿ.ಎ. ಕಾರ್ಯಕ್ರಮ ಸಂಯೋಜಕರು

ಡಾ. ನಾಗವೇಣಿ ಎಸ್. ಜೆ.
ಎಂ.ಪಿ.ಹೆಚ್., ಕಾರ್ಯಕ್ರಮ ಸಂಯೋಜಕರು

ಡಾ. ವೀರೇಶ್‌ಕುಮಾರ್ ವಿಜಾಪೂರ,
ಸಹಾಯಕ ನಿರ್ದೇಶಕರು, ದೈಹಿಕ ಶಿಕ್ಷಣ

ಡಾ. ಸಂಗನಗೌಡ ಪಾಟೀಲ
ಎಂ.ಎ. ಅರ್ಥಶಾಸ್ತ್ರ,
ಕಾರ್ಯಕ್ರಮ ಸಂಯೋಜಕರು

ಶ್ರೀ ಸುರೇಶ ಲಮಾಣಿ
ಎಂ.ಎಸ್ಸಿ. ಜಿಯೋಇನ್ಫಾರ್‌ಮೆಟಿಕ್ಸ್,
ಕಾರ್ಯಕ್ರಮ ಸಂಯೋಜಕರು

ಶ್ರೀ ಸೋಮಲಿಂಗ ಕರ್ಜಿ
ಎಂ.ಎಸ್.ಡಬ್ಲ್ಯೂ,
ಕಾರ್ಯಕ್ರಮ ಸಂಯೋಜಕರು

# ಕುಲಪತಿಗಳ ನುಡಿ



**ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಕುಲಪತಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ವಿಶ್ವವಿದ್ಯಾಲಯದಲ್ಲಿ ಅನೇಕ ವಿಸ್ತರಣಾ ಚಟುವಟಿಕೆಗಳು ಹಾಗೂ ಶೈಕ್ಷಣಿಕ ಚಟುವಟಿಕೆಗಳು ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ನಡೆಯುತ್ತಿದ್ದು, ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯು ಪ್ರಮುಖ ಹಾಗೂ ವಿಶೇಷ ಚಟುವಟಿಕೆಗಳನ್ನು ಕ್ರೋಡೀಕರಿಸಿ ಸುಂದರ ಹಾಗೂ ಸ್ಪಷ್ಟವಾಗಿ ತನ್ನ ಸಂಚಿಕೆಗಳಲ್ಲಿ ಮುದ್ರಣಗೊಳಿಸಿ, ಹೆಚ್ಚು ಓದುಗರಿಗೆ ತಲುಪಿಸುವಂತಹ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ. ವಿಶ್ವವಿದ್ಯಾಲಯದ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಹತ್ತು ಸಂಚಿಕೆಗಳು ಬಿಡುಗಡೆಗೊಂಡಿದ್ದು, ಹನ್ನೊಂದನೇ ಸಂಚಿಕೆಯು ಪ್ರಕಟಣೆ ಗೊಳ್ಳುತ್ತಿರುವುದು ಸಂತಸದ ವಿಷಯ. ಎಂದಿನಂತೆ, ಈ ಸಂಚಿಕೆಯಲ್ಲಿಯೂ ಗಣ್ಯರ, ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಲೇಖನಗಳು, ವಿಶ್ವವಿದ್ಯಾಲಯದಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳು, ಸಮಾವೇಶಗಳು ಹಾಗೂ ಮುಂತಾದವುಗಳ ವಿವರವನ್ನು ಬಿಂಬಿಸಲಾಗಿದೆ.

ಈ ಸಂಚಿಕೆಯಲ್ಲಿ ಪ್ರಮುಖವಾಗಿ ಶ್ರೀ ಅಶೋಕ ಕೋರಿ ಮನೋವೈದ್ಯಕೀಯ ಸಮಾಜ ಕಾರ್ಯಕರ್ತರು ಹಾಗೂ ಯೋಜನಾ ಸಂಯೋಜಕರು, ಸಮುದಾಯ ಮಾನಸಿಕ ಆರೋಗ್ಯ ಸೇವೆಗಳು (ಡಿಮ್ಹಾನ್ಸ್), ಧಾರವಾಡ ಇವರು ಬರೆದಿರುವ "ಆತ್ಮಹತ್ಯೆ ತಡೆಗಟ್ಟುವಿಕೆ: ಪ್ರಯತ್ನಗಳು ಮತ್ತು ಸವಾಲುಗಳು" ಲೇಖನವು ವಿಶೇಷವಾಗಿದ್ದು, ಸಾರ್ವಜನಿಕರಲ್ಲಿ ಆತ್ಮಹತ್ಯೆ ತಡೆಗಟ್ಟುವಿಕೆ ಬಗ್ಗೆ ಅರಿವು ಮೂಡಿಸುವಲ್ಲಿ ಸಹಾಯಕವಾಗಿದೆ.

ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್, ಬೆಂಗಳೂರು ಇವರ ಸಹಯೋಗದೊಂದಿಗೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದ್ದು, ವಿಚಾರ ಸಂಕಿರಣದ ಮುಖ್ಯ ವಿಷಯವು ಸಂವಿಧಾನದ 73ನೇ ತಿದ್ದುಪಡಿಗೆ 30 ವರ್ಷ ಸಂದಿದ್ದು, ಈ ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ಪಂಚಾಯತ್ ಸಂಸ್ಥೆಗಳು ನಡೆದು ಬಂದ ಹಾದಿಯನ್ನು ಹಾಗೂ ಕ್ರಮಿಸಬೇಕಿರುವ ದೂರವನ್ನು ಗಮನದಲ್ಲಿರಿಸಿಕೊಂಡು ವಿವಿಧ ವಿಷಯಗಳನ್ನು ಚರ್ಚಿಸಲಾಯಿತು. ಎರಡು ದಿನದ ವಿಚಾರ ಸಂಕಿರಣದಲ್ಲಿ ಸುಮಾರು 30ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಹಾಗೂ 40ಕ್ಕೂ ಹೆಚ್ಚು ಪ್ರಬಂಧ ಮಂಡನಾಕಾರರು ಭಾಗವಹಿಸಿದ್ದರು. ಮಾನ್ಯ ಶ್ರೀ ಡಾ. ಹೆಚ್.ಕೆ.ಪಾಟೀಲ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿರುವುದು ಹೆಮ್ಮೆಯ ವಿಷಯ.

ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬಿಸಿ ಕೋಶದ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಜಗಜೀವನ್ ರಾಮ್ ಅವರ ಜಯಂತೋತ್ಸವ ಅಂಗವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿತ್ತು. ಹಿಂದುಳಿದವರನ್ನು ಸಮಾಜದ ಮುಖ್ಯ ವಾಹಿನಿಗೆ ಕರೆತರುವ ಎಲ್ಲರ ಜೊತೆಗೆ ಕರೆದೊಯ್ಯುವ ಉದ್ದೇಶ ಡಾ. ಬಿ. ಆರ್. ಅಂಬೇಡ್ಕರ್ ಅವರದಾಗಿದ್ದು, ಅವರನ್ನು ಜ್ಞಾನದ ಮತ್ತು ಸಮಾನತೆಯ ಸಂಕೇತವಾಗಿ ವಿದ್ಯಾರ್ಥಿಗಳು ಅರಿಯಬೇಕು.

ವಿಶ್ವವಿದ್ಯಾಲಯವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯದಲ್ಲಿ ವಿಶ್ವ ಬಿದಿರು ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ವಿಶ್ವವಿದ್ಯಾಲಯದ ಆವರಣದಲ್ಲಿ ಬಿದಿರು ಗಿಡಗಳನ್ನು ನೆಡಲಾಯಿತು. ಈ ಕಾರ್ಯಕ್ರಮವು ಸುಸ್ಥಿರತೆ, ಪರಿಸರ ಜಾಗೃತಿಗೆ ಕೊಡುಗೆ ಮತ್ತು ಆವರಣದಲ್ಲಿ ಯೋಗಕ್ಷೇಮಕ್ಕೆ ಬದ್ಧತೆಯನ್ನು ಸಂಕೇತಿಸುತ್ತದೆ.

ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ಕ್ರೋಡೀಕರಿಸಿ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಹನ್ನೊಂದನೇ ಸಂಚಿಕೆಯಲ್ಲಿ ವಿವರವಾಗಿ ಬಿಂಬಿಸಿರುವ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಸಂಪಾದಕೀಯ ಮಂಡಳಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

**ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಕುಲಪತಿಗಳು

# ಕುಲಸಚಿವರ ಆಶಯ



'ಗ್ರಾಮೋದಯ' ತ್ರೈಮಾಸಿಕ ಪತ್ರಿಕೆಯು ವಿಶ್ವವಿದ್ಯಾಲಯದಲ್ಲಿ ಜರುಗುತ್ತಿರುವ ವಿವಿಧ ವಿಶೇಷ ಚಟುವಟಿಕೆಗಳ ಬಗ್ಗೆ ವಿವರ ಹಾಗೂ ಗಣ್ಯರ ಮತ್ತು ವಿಶ್ವವಿದ್ಯಾಲಯದ ಅಧಿಕಾರಿ / ಸಿಬ್ಬಂದಿಗಳ / ವಿದ್ಯಾರ್ಥಿಗಳ ಲೇಖನಗಳನ್ನು ಬಿಂಬಿಸುತ್ತಿದ್ದು, ಈ ವರೆಗೆ ಹತ್ತು ಸಂಚಿಕೆಗಳು ಬಿಡುಗಡೆಗೊಂಡಿದ್ದು, ಹನ್ನೊಂದನೇ ಸಂಚಿಕೆಯೂ ಬಿಡುಗಡೆಗೊಳ್ಳುತ್ತಿರುವುದು ಸಂತಸದ ವಿಷಯವಾಗಿದೆ. ಈ ಸಂಚಿಕೆಯಲ್ಲಿ ಬಿಂಬಿಸಿರುವ ಶ್ರೀ ಅಶೋಕ ಕೋರಿ ಮನೋವೈದ್ಯಕೀಯ ಸಮಾಜ ಕಾರ್ಯಕರ್ತರು ಹಾಗೂ ಯೋಜನಾ ಸಂಯೋಜಕರು, ಸಮುದಾಯ ಮಾನಸಿಕ ಆರೋಗ್ಯ ಸೇವೆಗಳು (ಡಿಮ್ಹಾನ್ಸ್), ಧಾರವಾಡ ಇವರು ಬರದಿರುವ ವಿಶೇಷ ಲೇಖನ "ಆತ್ಮಹತ್ಯೆ ತಡೆಗಟ್ಟುವಿಕೆ: ಪ್ರಯತ್ನಗಳು ಮತ್ತು ಸವಾಲುಗಳು" ವಿದ್ಯಾರ್ಥಿಗಳಲ್ಲಿ ಹಾಗೂ ಜನಸಾಮಾನ್ಯರಲ್ಲಿ ಆತ್ಮಹತ್ಯೆ ತಡೆಗಟ್ಟುವಿಕೆ ಬಗ್ಗೆ ಅರಿವು ಮೂಡಿಸುವ ದೃಷ್ಟಿಯಿಂದ ಸಹಾಯಕವಾಗಿದೆ. ವಿಶ್ವವಿದ್ಯಾಲಯದಿಂದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್, ಬೆಂಗಳೂರು ಇವರ ಸಹಯೋಗದೊಂದಿಗೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸ ಲಾಗಿತ್ತು. ಈ ವಿಚಾರ ಸಂಕಿರಣದ ಮುಖ್ಯ ವಿಷಯವು ಸಂವಿಧಾನದ 73ನೇ ತಿದ್ದುಪಡಿಗೆ 30 ವರ್ಷ ಸಂದಿದ್ದು, ಈ ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ಪಂಚಾಯತ್ ಸಂಸ್ಥೆಗಳು ನಡೆದು ಬಂದ ಹಾದಿಯನ್ನು ಹಾಗೂ ಕ್ರಮಿಸಬೇಕಿರುವ ದೂರವನ್ನು ಗಮನದಲ್ಲಿರಿಸಿ ಕೊಂಡು ವಿವಿಧ ವಿಷಯಗಳನ್ನು ಚರ್ಚಿಸಲಾಯಿತು. ಮಾನ್ಯ ಶ್ರೀ ಡಾ. ಹೆಚ್.ಕೆ.ಪಾಟೀಲ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದ್ದು, ಸುಮಾರು 30ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಹಾಗೂ 40ಕ್ಕೂ ಹೆಚ್ಚು ಪ್ರಬಂಧ ಮಂಡನಾಕಾರರು ಭಾಗವಹಿಸಿದ್ದು, ಸಂತಸದ ವಿಷಯ.

ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯನ್ನು ಹೊರತರಲು ಪ್ರೇರಣೆಯಾದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ತ್ರೈಮಾಸಿಕ ಪತ್ರಿಕೆಯ 11ನೇ ಆವೃತ್ತಿಯಲ್ಲಿ ಈ ಎಲ್ಲಾ ಚಟುವಟಿಕೆಗಳ ಬಗ್ಗೆ ವಿವರವಾಗಿ ಬಿಂಬಿಸಿರುವ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಪ್ರಧಾನ ಸಂಪಾದಕರು, ಸಹ ಸಂಪಾದಕರು, ಸದಸ್ಯರುಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಬಸವರಾಜ ಎಲ್. ಲಕ್ಕಣ್ಣವರ**
ಕುಲಸಚಿವರು



**ಪ್ರೊ. ಬಸವರಾಜ ಎಲ್. ಲಕ್ಕಣ್ಣವರ**
ಕುಲಸಚಿವರು,
ಕ.ರಾ.ಗ್ರಾ. ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ

# ಹಣಕಾಸು ಅಧಿಕಾರಿಗಳ ಸಂದೇಶ



**ಶ್ರೀ ಪ್ರಶಾಂತ ಜೆ. ಸಿ.**
ವಿತ್ತಾಧಿಕಾರಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ವಿಶ್ವವಿದ್ಯಾಲಯದ "ಗ್ರಾಮೋದಯ" ತ್ರೈಮಾಸಿಕ ಪತ್ರಿಕೆಯ ಹತ್ತು ಸಂಚಿಕೆಗಳು ಬಿಡುಗಡೆಗೊಂಡಿದ್ದು, ಹನ್ನೊಂದನೇ ಸಂಚಿಕೆಯು ಪ್ರಕಟಣೆಗೊಳ್ಳುತ್ತಿರುವುದು ಸಂತಸದ ವಿಷಯವಾಗಿದ್ದು, ಎಂದಿನಂತೆ, ಈ ಸಂಚಿಕೆಯಲ್ಲಿಯೂ ಗಣ್ಯರ, ಸಿಬ್ಬಂದಿಗಳ ಹಾಗೂ ವಿದ್ಯಾರ್ಥಿಗಳ ಲೇಖನಗಳು ಮತ್ತು ಮುಂತಾದವುಗಳ ವಿವರವನ್ನು ಬಿಂಬಿಸಲಾಗಿದೆ.

ಈ ಸಂಚಿಕೆಯಲ್ಲಿ ಪ್ರಮುಖವಾಗಿ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್, ಬೆಂಗಳೂರು ಇವರ ಸಹಯೋಗದೊಂದಿಗೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಮತ್ತು ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬಿಸಿ ಕೋಶದ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಜಗಜೀವನ್ ರಾಮ್ ಅವರ ಜಯಂತೋತ್ಸವ ಅಂಗವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನದ ಕಾರ್ಯಾಗಾರವನ್ನು ಹಾಗೂ ವಿಶ್ವವಿದ್ಯಾಲಯ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸಹಯೋಗದೊಂದಿಗೆ ವಿಶ್ವ ಬಿದಿರು ದಿನಾಚರಣೆಯ ಕಾರ್ಯಕ್ರಮವನ್ನು ಆಚರಿಸಲಾಗಿದ್ದು, ಈ ಎಲ್ಲಾ ಚಟುವಟಿಕೆಗಳ ಬಗ್ಗೆ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ 11ನೇ ಆವೃತ್ತಿಯಲ್ಲಿ ವಿವರವಾಗಿ ಬಿಂಬಿಸಿರುವ ಪ್ರಧಾನ ಸಂಪಾದಕರಾದ ಡಾ. ಅಬ್ದುಲ್ ಅಜೀಜ್ ಮುಲ್ಲಾ ಇವರಿಗೆ ಮತ್ತು ಸಹ ಸಂಪಾದಕರು, ಸದಸ್ಯರುಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ತ್ರೈಮಾಸಿಕ ಪತ್ರಿಕೆಯು ಇನ್ನೂ ಸುಂದರವಾಗಿ ಪ್ರತಿಬಿಂಬಿಸಿ, ಇನ್ನೂ ಹೆಚ್ಚು ಓದುಗರನ್ನು ತಲುಪಿ ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ.

**ಶ್ರೀ ಪ್ರಶಾಂತ್ ಜೆ. ಸಿ.**
ಹಣಕಾಸು ಅಧಿಕಾರಿಗಳು

# ಆತ್ಮಹತ್ಯೆ ತಡೆಗಟ್ಟುವಿಕೆ : ಪ್ರಯತ್ನಗಳು ಮತ್ತು ಸವಾಲುಗಳು



**ಶ್ರೀ ಅಶೋಕ ಕೋರಿ**
ಮನೋವೈದ್ಯಕೀಯ ಸಮಾಜಕಾರ್ಯಕರ್ತರು
ಹಾಗೂ ಯೋಜನಾ ಸಂಯೋಜಕರು
ಸಮುದಾಯ ಮಾನಸಿಕ ಆರೋಗ್ಯ ಸೇವೆಗಳು
(ಡಿಮ್ಹಾನ್ಸ್), ಧಾರವಾಡ

ಈ ಜಗತ್ತು ಎರಡು ಮಹಾ ಕೋವಿಡ್ ಹೊಡೆತಕ್ಕೆ ನಲುಗಿ, ಅದೆಷ್ಟೋ ಜನರು ತಮ್ಮ ಅಮೂಲ್ಯವಾದ ಜೀವಗಳನ್ನು ಕಳೆದುಕೊಂಡಿದ್ದಾರೆ. ಪ್ರಪಂಚದ ಅತ್ಯಂತ ಶಕ್ತಿಶಾಲಿ ರಾಷ್ಟ್ರ ಚೀನಾ ದೇಶವು ಕೂಡ ಇತ್ತೀಚೆಗೆ ಕೋವಿಡ್ ಸೋಂಕಿನ ಪ್ರಭಾವದಿಂದ ನಲುಗಿ ಹೋಗುತ್ತಿದೆ. ಅಲ್ಲಿನ ಅದೆಷ್ಟೋ ಜನರು ಸಂಕಷ್ಟ ಪಡುವ ಯಾತನೆಯನ್ನು ನಾವು ಸುದ್ದಿ ಮಾಧ್ಯಮಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ. ಕೊರೋನಾ ಅವಧಿಯಲ್ಲಿ ಕೂಡ ಆತ್ಮಹತ್ಯೆಗಳ ಪ್ರಕರಣಗಳನ್ನು ಸುದ್ದಿ ಮಾಧ್ಯಮಗಳಲ್ಲಿ ಓದಿ ಅರ್ಥೈಸಿಕೊಂಡಿದ್ದೇವೆ. ಆತ್ಮಹತ್ಯೆಗಳು ಈ ಜಗತ್ತಿಗೆ ಹೊಸದೇನಲ್ಲ. ಅನೇಕ ಶತಮಾನಗಳಿಂದಲೂ ಮುಂದುವರಿಯುತ್ತಲೇ ಬಂದಿವೆ.

ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳಲ್ಲಿ ನೀಡಿರುವ ಮಾಹಿತಿಯನ್ನು ತಿಳಿಯುವುದಾದರೆ ಪ್ರತಿ 45 ಸೆಕೆಂಡಿಗೆ ಜಗತ್ತಿನಲ್ಲಿ ಯಾರಾದರೂ ಒಬ್ಬರು ಮರಣಕ್ಕೆ ತುತ್ತಾಗುತ್ತಾರೆ. ವಿಶ್ವದಲ್ಲಿ ಅಂದಾಜು ವರ್ಷಕ್ಕೆ 7 ಲಕ್ಷಕ್ಕೂ ಹೆಚ್ಚು ಜನರು ಆತ್ಮಹತ್ಯೆಗೆ ಶರಣಾಗಿ ಸಾವನ್ನಪ್ಪುತ್ತಾರೆ. ಪ್ರತಿ ಆತ್ಮಹತ್ಯೆ ಘಟನೆಯು ಸಾರ್ವಜನಿಕರ ಆರೋಗ್ಯದ ಕಾಳಜಿಯಾಗಿದ್ದು, ಇದು ಅವರ ಸುತ್ತಮುತ್ತಲಿನವರ ಮೇಲೆ ಆಳವಾದ ಪರಿಣಾಮ ಬೀರುತ್ತದೆ.

ಆತ್ಮಹತ್ಯೆಗಳ ಪ್ರಕರಣಗಳನ್ನು ನಾವು ಅವಲೋಕಿಸಿದಾಗ, ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳು ಕೆಲವು ಮೂನ್ಸೂಚನೆಗಳನ್ನು ನೀಡಿರುತ್ತಾರೆ ಅಥವಾ ನೀಡುತ್ತಿರುತ್ತಾರೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು ಮತ್ತು ತಕ್ಷಣ ಕಾರ್ಯಪ್ರವೃತ್ತರಾದಾಗ ಮಾತ್ರ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗೆ ಸಹಾಯಮಾಡಬಹುದು. ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳು ಆತ್ಮಹತ್ಯೆಯ ಬಗ್ಗೆ ಮಾತನಾಡುವುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳುವ ಯೋಜನೆ ಮಾಡುವುದು, ಪದೇ ಪದೇ ನಿಸ್ಸಹಾಯಕತೆ ಬಗ್ಗೆ ಅಭಿಪ್ರಾಯಗಳನ್ನು ಹೇಳುವುದು, ಕುಟುಂಬ ಮತ್ತು ಸ್ನೇಹಿತರೊಂದಿಗಿನ ಸಂಪರ್ಕದಿಂದ ಏಕಾಂಗಿಯಾಗಿ ದೂರವಿರುವುದು, ಯಾವಾಗಲೂ ಒಬ್ಬರೇ ಇರುವುದು, ಮತ್ತು ಅತಿಯಾದ ಕೀಳಿರಿಮೆಯನ್ನು



ಬೆಳೆಸಿಕೊಂಡಿರುವುದು ಈ ರೀತಿಯ ಅಥವಾ ಇನ್ನು ಬೇರೆ ಬೇರೆ ರೀತಿಯ ಲಕ್ಷಣಗಳನ್ನು ಹೊಂದಿರುತ್ತಾರೆ.

ವ್ಯಕ್ತಿಗಳಿಗೆ ನಕಾರಾತ್ಮಕ ಯೋಚನೆಗಳು ಆಗುವ ಕೆಲಸಗಳನ್ನು ಆಗದೇ ಮಾಡುವಂತೆ ಮಾಡುತ್ತವೆ. ಉದಾಹರಣೆಗೆ ಹಲವು ದಿನಗಳಿಂದ ಆನೆಗೆ ಸರಪಳಿಯಿಂದ ಕಟ್ಟಿಹಾಕಿರುತ್ತಾರೆ. ತದನಂತರ ಆನೆಗೆ ಚಿಕ್ಕ ಹಗ್ಗವನ್ನು ಹಾಕಿದರೂ ಆನೆ ಸರಪಳಿ ಹಾಕಿದ್ದಾರೆ ಎಂದು ತಿಳಿದು ಸುಮ್ಮನೆ ಇರುತ್ತದೆ. ಹಾಗೆ ಮನುಷ್ಯನ ನಕಾರಾತ್ಮಕ ಯೋಚನೆಗಳು ಏನನ್ನು ಸಾಧಿಸಲು ಆಗದೇ ಇರುವಂತೆ ಮಾಡಿಬಿಡುತ್ತವೆ. ಇಂತಹ ಯೋಚನೆಗಳು ಖಿನ್ನತೆ ಕಾಯಿಲೆ ಹೊಂದಿರುವ ಹಲವು ಜನರಲ್ಲಿ ಕೂಡ ಕಾಡುತ್ತವೆ. ತೀವ್ರತೆರನಾದ ಖಿನ್ನತೆ ಅಥವಾ ಅತಿತೀವ್ರತೆರನಾದ ಖಿನ್ನತೆ ಕಾಯಿಲೆ ಇರುವ ಜನರಲ್ಲಿ ಆತ್ಮಹತ್ಯೆ ಯೋಚನೆಗಳು ಕಾಡುವುದುಂಟು. ಹಾಗಾಗಿ ಇಂತಹ ಸನ್ನಿವೇಶಗಳಲ್ಲಿ ಯಾವುದೇ ಮುಜುಗರಕ್ಕೆ ಒಳಗಾಗದೇ ವೈದ್ಯರ ಬಳಿ ಹೋಗಿ ಸೂಕ್ತ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆಯನ್ನು ಪಡೆದುಕೊಂಡಲ್ಲಿ ಆತ್ಮಹತ್ಯೆ ಯೋಚನೆಗಳಿಂದ ಹೊರಬರಲು ಸಾಧ್ಯವಾಗುತ್ತದೆ.

ಆತ್ಮಹತ್ಯೆ ಮಾಡಿಕೊಳ್ಳುವ ತೀವ್ರವಾದ ಯೋಚನೆಗಳು ದೂರದ ಪ್ರದೇಶಗಳಲ್ಲಿರುವ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿರುವ ವ್ಯಕ್ತಿಗಳಲ್ಲಿ ಕಂಡು ಬಂದರೆ, ಅಂತಹವರು ತಕ್ಷಣ ವೈದ್ಯರ ಸಂಪರ್ಕವನ್ನು ಪಡೆಯಲು ಆಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಆತ್ಮಹತ್ಯೆ ತಡೆಗಟ್ಟುವ ಸಲುವಾಗಿ ಇರುವ ಸಹಾಯವಾಣಿ ಸಂಖ್ಯೆಗಳಿಗೆ ಕರೆಮಾಡಿ ಸಹಾಯವನ್ನು ಪಡೆದುಕೊಳ್ಳಬಹುದು. ಸಮೀಪದ ಪ್ರದೇಶಗಳಲ್ಲಿ ಲಭ್ಯವಿರುವ ವೈದ್ಯರ ಅಥವಾ ಮನೋವೈದ್ಯರ ಬಳಿ ತೆರಳಿ ಸೂಕ್ತ ಚಿಕಿತ್ಸೆ ಮತ್ತು ಆಪ್ತಸಮಾಲೋಚನೆ ಪಡೆದುಕೊಳ್ಳಬಹುದು. ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಾದ ಡಿಮ್ಹಾನ್ಸ್ ಧಾರವಾಡ ಮತ್ತು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗಳಲ್ಲಿ ಹಾಗೂ ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಮನೋವೈದ್ಯರು ಲಭ್ಯವಿದ್ದು, ಸೂಕ್ತ ಚಿಕಿತ್ಸೆಯನ್ನು ಮತ್ತು ಮಾರ್ಗದರ್ಶನವನ್ನು ಪಡೆದುಕೊಳ್ಳಬಹುದು. ಆತ್ಮಹತ್ಯೆ ಯೋಚನೆಗಳು ಬಂದಾಗ ಯಾವ ವೈದ್ಯರು ಲಭ್ಯವಿಲ್ಲದೇ ಹೋದ ಪಕ್ಷದಲ್ಲಿ ಹತ್ತಿರವಿರುವ ಸಂಬಂಧಿಕರು ಅಥವಾ ಸ್ನೇಹಿತರ ಬಳಿ ಭಾವನೆಗಳನ್ನು ಹಂಚಿಕೊಳ್ಳಬೇಕು. ಕೆಲವು ನಿಮಿಷಗಳು ಜೀವನದ ದಾರಿಯನ್ನು ಬದಲಿಸಬಲ್ಲವು. ಭವಿಷ್ಯದ ಬಗ್ಗೆ ಆಶಾವಾದಿಯಾಗಲು ಪ್ರಯತ್ನಿಸುವುದರಿಂದ ಆತ್ಮಹತ್ಯೆ ಯೋಚನೆಗಳು ಬರುವುದಿಲ್ಲ.

2022–23 ನೇ ವರ್ಷದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ಧ್ಯೇಯವಾಕ್ಯವು ಕೂಡ "ಕ್ರಿಯೆಯ ಮೂಲಕ ಭರವಸೆಯನ್ನು ಸೃಷ್ಟಿಸುವುದು" ಆಗಿತ್ತು. ಆತ್ಮಹತ್ಯೆಯ ಸಂಕಷ್ಟದ ಸ್ಥಿತಿಯನ್ನು ಅರ್ಥಮಾಡಿ ಕೊಳ್ಳುವುದು ಅತ್ಯಂತ ಸೂಕ್ಷ್ಮವಾದ ವಿಷಯವೇ ಸರಿ. ನೊಂದ ಅಥವಾ ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಗಳ ಸ್ಥಿತಿಯನ್ನು ಅರಿತು ಅಂತಹವರಿಗೆ ಸ್ನೇಹಿತರಾಗಿ ಅಥವಾ ಸಮಾಜದ ಮುಖ್ಯ ಜವಾಬ್ದಾರಿಯುತ ಸದಸ್ಯರಾಗಿ ಅವರನ್ನು ಬೆಂಬಲಿಸಿ, ಅವರ ಆತ್ಮಸ್ಥೈರ್ಯವನ್ನು ತುಂಬುವ ಕೆಲಸ ಮಾಡಿದಲ್ಲಿ ಅದೊಂದು ಶ್ಲಾಘನೀಯ ಕೆಲಸವಾಗುತ್ತದೆ. ಕ್ರಿಯೆಯ ಮೂಲಕ ಭರವಸೆಯನ್ನು ಮೂಡಿಸುವುದೆಂದರೆ ಸಂಕಷ್ಟದಲ್ಲಿರುವ ಜನರ ಭಾವನೆಗಳಿಗೆ ಸ್ಪಂದಿಸಿ ಅವರ ಜೀವನವನ್ನು ವೃದ್ಧಿಗೊಳಿಸುವುದಾಗಿದೆ. ಇದು ಚಿಕ್ಕ ಕೆಲಸವಾದರೂ ಅದರ ಪ್ರಭಾವ ದೊಡ್ಡದಾಗಿರುತ್ತದೆ.

ವಿವಿಧ ದೇಶಗಳಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಗಳಲ್ಲಿ ಆತ್ಮಹತ್ಯೆ ತಡೆಗಟ್ಟಲು ವಿಶೇಷ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಆತ್ಮಹತ್ಯೆಗೆ ಕಾರಣಗಳನ್ನು ನಿಖರವಾಗಿ ತಿಳಿದುಕೊಳ್ಳಲು ಸಂಶೋಧನಾ ಕೇಂದ್ರಗಳನ್ನು ಬೇರೆ ಬೇರೆ ದೇಶಗಳಲ್ಲಿ ಪ್ರಾರಂಭಿಸಲಾಗಿದೆ. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಇದರ ಮುಖ್ಯ ಉದ್ದೇಶ ಸಮುದಾಯವನ್ನು ಜಾಗೃತಿ ಮಾಡುವುದು. ಸಮಾಜದ ವಿವಿಧ ಸಂಘ ಸಂಸ್ಥೆಗಳು, ಕಾಲೇಜುಗಳು, ವಿಶ್ವವಿದ್ಯಾ–ಲಯಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಇತರ ಇಲಾಖೆಗಳ ಸಹಯೋಗದಲ್ಲಿ ಆತ್ಮಹತ್ಯೆ ಘಟನೆಗಳನ್ನು ತಡೆಗಟ್ಟುವ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ.

ಈಗಾಗಲೇ ಹಲವಾರು ದೇಶಗಳಲ್ಲಿ ಆತ್ಮಹತ್ಯೆ ತಡೆಗಟ್ಟುವಿಕೆಗೆ ಸಂಬಂಧಿಸಿದ ಶೈಕ್ಷಣಿಕ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ಆತ್ಮಹತ್ಯೆಗೆ ಸಹಾಯವಾಣಿ, ತಜ್ಞರಿಂದ ಆಪ್ತಸಮಾಲೋಚನೆ ಮಾಡುವುದು, ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗಳಲ್ಲಿ ಖಿನ್ನತೆ ಕಾಯಿಲೆಗೆ ಪರಿಣಾಮಕಾರಿ ಔಷಧಗಳನ್ನು ಕೊಡುವುದು ಮತ್ತು ವಿದ್ಯುತ್ ಕಂಪನ ಚಿಕಿತ್ಸೆ ಕೊಡುವ ವೈಜ್ಞಾನಿಕ ಪದ್ಧತಿಗಳನ್ನು ಇಂದು ಕಾಣಬಹುದು. ವಿವಿಧ ಸರಕಾರಿ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಕೂಡ ಆತ್ಮಹತ್ಯೆಯ ಪ್ರಮಾಣವನ್ನು ತಗ್ಗಿಸಲು ನಿರಂತವಾಗಿ ಶ್ರಮಿಸುತ್ತಿವೆ. ಆರೋಗ್ಯ ಕ್ಷೇತ್ರಗಳಲ್ಲಿ ಆತ್ಮಹತ್ಯೆಗಳ ಪ್ರಕರಣಗಳನ್ನು ತಡೆಗಟ್ಟಲು ಅನೇಕ ತಜ್ಞರು ಸಂಶೋಧನೆಗಳಲ್ಲಿ ನಿರತರಾಗಿದ್ದಾರೆ. ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಸಾರ್ವಜನಿಕರಲ್ಲಿ ಆತ್ಮಹತ್ಯೆ

ಗಳನ್ನು ತಡೆಗಟ್ಟುವ ಕುರಿತು ಅರಿವು ಮೂಡಿಸಲು ವಿವಿಧ ಸರಕಾರಿ/ಸರಕಾರೇತರ ಸಂಸ್ಥೆಗಳೊಂದಿಗೆ ಆತ್ಮಹತ್ಯೆ ತಡೆಗಟ್ಟುವ ಜಾಗೃತಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಕೇವಲ ಆರ್ಥಿಕ ಸಮಸ್ಯೆಗಳು ನಿವಾರಣೆ ಆದರೆ ಆತ್ಮಹತ್ಯೆ ಪ್ರಕರಣಗಳು ಆಗುವುದಿಲ್ಲ ಎನ್ನುವ ತಿರ್ಮಾನ ಬರಲು ಸಾಧ್ಯವಿಲ್ಲ. ಇಂದು ಆತ್ಮಹತ್ಯೆಯನ್ನು ತಡೆಗಟ್ಟುವುದು ಒಂದು ಜಾಗತಿಕ ಸವಾಲು ಆಗಿ ನಮ್ಮ ಮುಂದೆ ನಿಂತಿದೆ. ಕೊರೋನಾ ಅಂತಹ ಹೊಸ ಹೊಸ ರೋಗಗಳು ಕಾಡಲು ಆರಂಭಿಸಿದರೆ ಜನರ ನೆಮ್ಮದಿ ಹಾಳಾಗುತ್ತದೆ. ಕೊರೋನಾ ಬಂದ ನಂತರ ಭಾರತ ದೇಶದಲ್ಲಿ ಈಗಾಗಲೇ ಜನರಿಗೆ ದೊರಕಿದ ವ್ಯಾಕ್ಸಿನ್ ಸೌಲಭ್ಯದಿಂದಾಗಿ ದೊಡ್ಡ ಸಂಕಷ್ಟದಿಂದ ಹೊರ ಬಂದಿದ್ದೇವೆ ಎಂದು ಅನ್ನಿಸಿದೆ.

ಅನೇಕ ತಜ್ಞರು ಪ್ರತಿ ಆತ್ಮಹತ್ಯೆಯನ್ನು ತಡೆಗಟ್ಟಬಹುದಾಗಿದೆ ಎಂದು ಹೇಳುತ್ತಾರೆ. ಸಾರ್ವಜನಿಕರಲ್ಲಿ ಆತ್ಮಹತ್ಯೆ ತಡೆಗಟ್ಟುವಿಕೆ ಬಗ್ಗೆ ಮತ್ತು ಅವರನ್ನು ಕೌಶಲ್ಯಯುತ ವ್ಯಕ್ತಿಗಳನ್ನಾಗಿ ಮಾಡಿ ಆತ್ಮಹತ್ಯೆ ಲಕ್ಷಣಗಳಿಂದ ಬಳಲುವ ಜನರ ಕುರಿತು ಅರಿವನ್ನು ಮೂಡಿಸುವುದರಿಂದ ಆತ್ಮಹತ್ಯೆಯ ಪ್ರಮಾಣವನ್ನು ತಗ್ಗಿಸಲು ಸಾಧ್ಯವಾಗಬಹುದಾಗಿದೆ. ಜನಸಂಖ್ಯೆ ಹೆಚ್ಚಾದಂತೆ ವಿವಿಧ ಸಮಸ್ಯೆಗಳು ಹೆಚ್ಚಾಗುತ್ತವೆ. ನಮ್ಮ ಸುತ್ತಮುತ್ತಲಿನ ಸ್ಥಳಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಕಂಡು ಬಂದರೆ ಸುಮ್ಮನೆ ಕೂರದೇ ಅಂತಹ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳು ಮಾಡಿದ ಪಕ್ಷದಲ್ಲಿ ಜನರು ಸಕಾರಾತ್ಮಕ ಯೋಚನೆಗಳನ್ನು ಹೊಂದಿ ಭರವಸೆ ಯೊಂದಿಗೆ ಜೀವನದಲ್ಲಿ ಹೆಜ್ಜೆಯನ್ನು ಇಡುತ್ತಾರೆ.

ಭರವಸೆಯ ಕ್ರೀಯೆಗಳು ಜೀವನದಲ್ಲಿ ಮಿನುಗುವ ನಕ್ಷತ್ರಗಳಂತೆ, ಸದಾ ಬೆಳಕನ್ನು ನೀಡುತ್ತವೆ.

***

# “ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ : ಕರ್ನಾಟಕದಲ್ಲಿ ಪಂಚಾಯತಿಯಗಳು ನಡೆದು ಬಂದ ಹಾದಿ”



**ಡಾ. ಸಂತೋಷ್ ಕುಮಾರ್ ಪಿ. ಕೆ.**
ಐ.ಕ್ಯೂ.ಎ.ಸಿ. ಹಾಗೂ
ಬಿ.ಎ. ಕಾರ್ಯಕ್ರಮದ ಸಂಯೋಜಕರು
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಶನ್, ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ 1 ಮತ್ತು 2 ನೇ ಸಪ್ಟೆಂಬರ್ 2023ರಲ್ಲಿ ಗದಗದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ವಿಚಾರ ಸಂಕಿರಣದ ಮುಖ್ಯ ವಿಷಯವು ಸಂವಿಧಾನದ 73ನೇ ತಿದ್ದುಪಡಿಗೆ 30 ವರ್ಷ ಸಂದಿದ್ದು, ಈ ಮೂರು ದಶಕಗಳಲ್ಲಿ ಕರ್ನಾಟಕದಲ್ಲಿ ಪಂಚಾಯತ್ ಸಂಸ್ಥೆಗಳು ನಡೆದು ಬಂದ ಹಾದಿಯನ್ನು ಹಾಗೂ ಕ್ರಮಿಸಬೇಕಿರುವ ದೂರವನ್ನು ಗಮನದಲ್ಲಿರಿಸಿಕೊಂಡು ವಿವಿಧ ವಿಷಯಗಳನ್ನು ಚರ್ಚಿಸಲಾಯಿತು. ಪ್ರಸ್ತುತ ವಿಚಾರ ಸಂಕಿರಣದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಕ್ಷೇತ್ರದಲ್ಲಿ ನಿರತರಾಗಿರುವ ಅಧಿಕಾರಿಗಳು, ಸಂಶೋಧಕರು, ಕ್ಷೇತ್ರಜ್ಞರು ಹಾಗೂ ಪರಿಣಿತರನ್ನು ಒಳಗೊಂಡಂತೆ ನೂರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಈ ವಿಷಯಕ್ಕೆ ಸಂಬಂಧಿಸಿದಂತೆ 100ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ವಿವಿಧ ರಾಜ್ಯಗಳಿಂದ ಪರಿಣಿತರು ಕಳುಹಿಸಿದ್ದರು.

ಎರಡು ದಿನದ ವಿಚಾರ ಸಂಕಿರಣದಲ್ಲಿ ಸುಮಾರು 30ಕ್ಕೂ ಹೆಚ್ಚು ಸಂಪನ್ಮೂಲ ವ್ಯಕ್ತಿಗಳು ಹಾಗು 40ಕ್ಕೂ ಹೆಚ್ಚು ಪತ್ರಿಕೆ ಮಂಡನಾಕಾರರು ಭಾಗವಹಿಸಿದ್ದರು. ಒಟ್ಟು ವಿಚಾರಣ ಸಂಕಿರಣದ ರಚನೆಯನ್ನು ನೋಡುವುದಾದರೆ, ಉದ್ಘಾಟನೆ ಹಾಗೂ ಸಮಾರೋಪವನ್ನ ಒಳಗೊಂಡಂತೆ ಏಳು ತಾಂತ್ರಿಕ ಗೋಷ್ಠಿಗಳು ಹಾಗೂ ಮೂರು ಫಲಕ ಚರ್ಚಾ ಗೋಷ್ಟಿಗಳು (ಪ್ಯಾನಲ್) ಇದ್ದವು. ಮೂರು ಪ್ಯಾನಲ್ ಗೋಷ್ಠಿಗಳಿಗೆ ವಿವಿಧ ಕ್ಷೇತ್ರದ ಅಧಿಕಾರಿಗಳು, ಕ್ಷೇತ್ರಜ್ಞರು ಹಾಗೂ ಪರಿಣಿತರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

ಮಾನ್ಯ ಶ್ರೀ ಡಾ. ಹೆಚ್.ಕೆ.ಪಾಟೀಲ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು ಇವರು ಕಾರ್ಯಕ್ರಮವನ್ನು ದೀಪಬೆಳಗಿಸುವ ಮೂಲಕ ಉದ್ಘಾಟಿಸಿದರು



ಮಾನ್ಯ ಶ್ರೀ ಡಾ. ಹೆಚ್.ಕೆ.ಪಾಟೀಲ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಸಂಸದೀಯ ವ್ಯವಹಾರ ಹಾಗೂ ಪ್ರವಾಸೋದ್ಯಮ ಸಚಿವರು ಇವರು ಕಾರ್ಯಕ್ರಮವನ್ನು ದೀಪಬೆಳಗಿಸುವ ಮೂಲಕ ಉದ್ಘಾಟಿಸಿದರು. ಹಾಗೂ 73ನೇ ತಿದ್ದುಪಡಿಯ ನಂತರ 30 ವರ್ಷಗಳ ಗ್ರಾಮ ಸುರಾಜ್ಯದ ಪಯಣವನ್ನು ಸಿಂಹಾವಲೋಕನ ಮಾಡುವ ಉದ್ದೇಶದಿಂದ ಈ ಸಮ್ಮೇಳನ ನಡೆದಿದೆ. ಗಾಂಧೀಜಿಯವರ ಕನಸು ಗ್ರಾಮಸುರಾಜ್ಯದ ಕನಸಾಗಿತ್ತು. ಅದನ್ನು ಅಂದಿನ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ರಾಜೀವ್ ಗಾಂಧಿಯವರು ಜಾರಿಗೆ ತರುವ ಪ್ರಯತ್ನ ಮಾಡಿದವರಲ್ಲಿ ಮೊದಲಿಗರು. ನಂತರ ಮಾನ್ಯ ಶ್ರೀ ನರಸಿಂಹರಾವ್‌ರವರು ಪ್ರಧಾನಿಗಳಾಗಿದ್ದಾಗ 3 ಹಂತದ ಪಂಚಾಯತ್ ರಾಜ್ ಆಕ್ಟ್ ಜಾರಿಗೆ ತಂದರು. ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗುವಂತೆ ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರು ಜಾರಿಗೆ ತಂದರು. ಅಂದಿನ ಗ್ರಾಮೀಣಾಭಿವೃದ್ಧಿ ಮಂತ್ರಿ ಶ್ರೀ ಘೋರ್ಪಡೆಯವರು 73ನೇ ತಿದ್ದುಪಡಿಯಂತೆ ಕರ್ನಾಟಕದಲ್ಲಿ 3 ಹಂತದ ಸ್ಥಳೀಯ ಸರ್ಕಾರ ರಚನೆಯ ಪಣ ತೊಟ್ಟರು. ಚುಣಾವಣೆಗೆ ಒತ್ತಾಯಿತಿ ರಾಜೀನಾಮೆ ಕೂಡ ನೀಡಿದ್ದರು. ಅಂದೇ ಬಸವಣ್ಣನವರು ಸ್ತ್ರೀ ಸಮಾನತೆ ಬಗ್ಗೆ –ಸ್ತ್ರೀಯರಿಗೆ– ಧಾರ್ಮಿಕ, ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಎಂದು ಹೇಳಿದ್ದರು. 73ನೇ ತಿದ್ದುಪಡಿ ಆ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಿದೆ ಎಂದು ಹೇಳಿದರು. ರಾಷ್ಟ್ರಕ್ಕೆ, ರಾಜ್ಯಕ್ಕೆ ಗ್ರಾಮ ಪಂಚಾಯತ್ ವ್ಯವಸ್ಥೆ ಮಾರ್ಗದರ್ಶನ ಮಾಡುವಂತ ಕೆಲಸ ಆಗಬೇಕು. ಆ ಕಾರ್ಯವನ್ನು ನಮ್ಮ ವಿಶ್ವವಿದ್ಯಾಲಯ ಮಾಡಬೇಕು.



73ನೇ ಕಾಯ್ದೆಯ ಪರಿಣಾಮ ಹಿಂದೆ ಗ್ರಾಮೀಣಾಭಿವೃದ್ಧಿ ಇಲಾಖೆಯು 15 ಸಾವಿರ ಸಭೆಗಳನ್ನು, 80 ಸಾವಿರ ಚಟುವಟಿಕೆ ಯೋಜನೆಗಳನ್ನು ಮಾಡಿತ್ತು. ಹಾಗೂ ಕಡ್ಡಾಯ ಮತದಾನ ಮಾಡುವಂತೆ ಮಾಡಿದ್ದು ಮತ್ತು ಚುಣಾವಣೆಯಲ್ಲಿ ನೋಟಾ ಮತದಾನಕ್ಕೆ ಅವಕಾಶ ಮಾಡಿಕೊಟ್ಟಿದ್ದು ಪ್ರಮುಖ ವಿಚಾರಗಳಲ್ಲಿ ಒಂದಾಗಿದೆ ಹಾಗೂ ಗ್ರಾಮ ಮಟ್ಟದಲ್ಲಿ ಅಸ್ಪೃಶ್ಯತೆಯನ್ನು ತೊಡೆದು ಹಾಕುವಲ್ಲಿ ಈ ಕಾನೂನು ಯಶಸ್ವಿಯಾಗಿದೆ. ಒಬ್ಬ ಸಾಮಾನ್ಯ ಮಹಿಳೆ ಗ್ರಾಮ ಪಂಚಾಯತ್ನ ಅಧ್ಯಕ್ಷರಾಗುವಂತೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಬೇಲೂರು ಘೋಷಣೆಯ ಮೂಲಕ ಪ್ರಮುಖವಾಗಿ 3ಎಫ್(ಕಾರ್ಯಗಳು, ಅಧಿಕಾರಿಗಳು/ಸಿಬ್ಬಂದಿ ಮತ್ತು ಹಣಕಾಸು) ವಿಚಾರವನ್ನು ಅನುಷ್ಠಾನಗೊಳಿಸಿದೆ ಎಂದು ತಿಳಿಸಿದರು ಹಾಗೂ ಇಂದು ಎಮ್‌ಎನ್‌ಆರ್‌ಇಜಿ ಕಾರ್ಯಕ್ರಮದ ಮೂಲಕ 21 ಅಂಶಗಳ ಕಾರ್ಯಚಟುವಟಿಕೆಗಳನ್ನು ಖಾತರಿ ಮಾಡಿದ್ದೇವೆ ಎಂದು ಅಭಿಪ್ರಾಯ ಪಟ್ಟರು. ಗ್ರಾಮಗಳು ನಿಜವಾಗಿಯೂ ಅಭಿವೃದ್ಧಿಯಾಗಬೇಕಾದರೆ ಗ್ರಾಮ ಮಟ್ಟದಲ್ಲಿ ಏನು ಅಭಿವೃದ್ಧಿ ಆಗಬೇಕು ಎಂಬುದನ್ನು ಗ್ರಾಮದವರೇ ಹೇಳಬೇಕು, ಅಂದಾಗ ಅಭಿವೃದ್ಧಿ ಸಾಧ್ಯ, ಪರಿಣಾಮಕಾರಿ ಕೆಲಸಕಾರ್ಯಗಳು ಆಗುತ್ತವೆ ಮತ್ತು ಪಿಡಿಓಗಳು ಗ್ರಾಮ ಸೇವಕರಾಗಿ ಕಾರ್ಯ ಮಾಡಬೇಕು, ಪಾರದರ್ಶಕ ಮತ್ತು ಲೆಕ್ಕಾಚಾರದಿಂದ ಗ್ರಾಮದಲ್ಲಿ ಕೆಲಸಗಳು ಆಗಬೇಕು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಳ್ಳಿಗಳಿಗೆ ತೆರಳಿ ಹಳ್ಳಿಯ ಅಭಿವೃದ್ಧಿಗೆ ಬೇಕಾದ ಅಂಶಗಳನ್ನು ಗುರುತಿಸಬೇಕು. ಸಮಸ್ಯೆಗಳನ್ನು ಅಲ್ಲಿಯೇ ಪರಿಹರಿಸುವಂತ ಪಠ್ಯವನ್ನು ಶಿಕ್ಷಣದಲ್ಲಿ ಜೋಡಿಸಬೇಕು ಎಂದರು ಮತ್ತು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯವು ಜಗತ್ತಿಗೆ, ದೇಶಕ್ಕೆ ಮತ್ತು ರಾಜ್ಯಕ್ಕೆ ಮಾರ್ಗದರ್ಶಕವಾಗಿ ಕೆಲಸ ಮಾಡಬೇಕು. ಆ ಕಡೆಗೆ ಪಠ್ಯವನ್ನು ಜೋಡಿಸಬೇಕು ಎಂದು ಅಭಿಪ್ರಾಯಪಟ್ಟರು. ಗಾಂಧೀಜಿಯವರ ಕನಸು ನನಸಾಗಬೇಕಾದರೆ ಗ್ರಾಮಗಳು ಅಪರಾಧ ರಹಿತ, ಶೋಷಣೆ ಮುಕ್ತಗ್ರಾಮ, ಭಯಮುಕ್ತಗ್ರಾಮ, ವಾಜ್ಯಮುಕ್ತ–ತಾಜ್ಯಮುಕ್ತ ಗ್ರಾಮ, ಬಯಲು ಬಹಿರ್ದೆಸೆ ಮುಕ್ತ ಆಗಬೇಕು ಎಂದು ತಿಳಿಸಿದರು.

ನಂತರ ಮಾತನಾಡಿದ ಮುಖ್ಯ ಅತಿಥಿಗಳಾದ ಡಾ. ವಿಜಯ ಭಾಸ್ಕರ್ ಭಾ.ಆ.ಸೇ. (ನಿವೃತ್ತ), ವಿಶ್ರಾಂತ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಗ್ರಾಮ ಸುರಾಜ್ಯದ ಮತ್ತು ಪಂಚಾಯತ್ ರಾಜ್ಯ ಕಾನೂನು ಗ್ರಾಮೀಣ ಜೀವನದ ಮೌಲ್ಯ ಹೆಚ್ಚಿಸಿದೆ ಹಾಗೂ ಗ್ರಾಮದಿಂದ ರಾಷ್ಟ್ರ ಬೆಳವಣಿಗೆ ಆಡಳಿತ ವಿಕೇಂದ್ರೀಕರಣದಿಂದ ಸಾಧ್ಯ ಎಂದು ತಿಳಿಸಿದರು. ಮುಂದುವರೆದು ಗ್ರಾಮಸಭೆ/ವಾರ್ಡ್‌ಸಭೆ ಸಬಲೀಕರಣದ ಮೂಲಕ ಪಂಚಾಯತಿಗಳನ್ನು ಬಲವರ್ಧನೆ ಮಾಡಬಹುದು ಎಂದು ತಿಳಿಸಿದರು. ಹಾಗೆಯೇ,

ಭಾಗೀದಾರರ ಸಮಿತಿಗಳು – ಅಂಗನವಾಡಿ, ಬಾಲವಿಕಾಸ, ನೀರು ನೈರ್ಮಲ್ಯ, ಜಲಾಯನ ಅಭಿವೃದ್ಧಿ, ಆರೋಗ್ಯ ರಕ್ಷಾ, ಶಾಲಾಭಿವೃದ್ಧಿ ಸಮಿತಿಗಳು ಬಲಗೊಳ್ಳಬೇಕು ಎಂದು ಅಭಿಪ್ರಾಯಪಟ್ಟರು. ಆಡಳಿತದ ನಿಜವಾದ ವಿಕೇಂದ್ರೀಕರಣವು ಸಾಧ್ಯವಾಗುವುದು ಗ್ರಾಮದ ಜನರಿಗೆ ಬೇಕಿರುವ ಪ್ರಮಾಣ ಪತ್ರಗಳನ್ನು ಪಂಚಾಯತಿಗಳೇ ವಿತರಿಸುವಂತಾದರೆ ಮಾತ್ರ ಸಾಧ್ಯ ಎಂದು ತಿಳಿಸಿದರು. ಮತ್ತೊಬ್ಬ ಅತಿಥಿಗಳಾದ ಕರ್ನಾಟಕ ಪಂಚಾಯತ್ ರಾಜ್ ಇಲಾಖೆಯ ಸಲಹೆಗಾರರಾದ ಡಾ. ಏಕಾಂತಪ್ಪ ರವರು ಮಾತನಾಡಿ ಸಂವಿಧಾನದ 73ನೇ ತಿದ್ದುಪಡಿಯಾದ ನಂತರದ ಆದಂತಹ ಬದಲಾವಣೆಗಳನ್ನು ಕೂಲಂಕುಷವಾಗಿ ವಿವರಿಸಿದರು.

ಅಂತಹ ಪ್ರಮುಖ ಅಂಶಗಳೆಂದರೆ, ರಾಮಾಯಣ, ಮಹಾಭಾರತದ ಕಾಲದಿಂದಲೇ ಭಾರತೀಯರಲ್ಲಿ ಗ್ರಾಮ ಸುರಾಜ್ಯದ ಕಲ್ಪನೆ ಇತ್ತು, ವಿಕೇಂದ್ರೀಕರಣ ಎನ್ನುವುದು ಭಾರತಕ್ಕೆ ಆಧುನೀಕತೆಯ ಕೊಡುಗೆಯಲ್ಲ ಎಂದರು ಹಾಗೂ ಸ್ವಾತಂತ್ರ್ಯಾನಂತರ 1993ರಲ್ಲಿ 3 ಹಂತದ ಸ್ಥಳೀಯ ಸರಕಾರ ಜಾರಿಗೆ, ಜಿಲ್ಲಾಮಟ್ಟ, ತಾಲೂಕು ಮಟ್ಟ ಮತ್ತು ಗ್ರಾಮ ಮಟ್ಟದ ಪಂಚಾಯತ್ ಇದರ ಪ್ರಮುಖ ಉದ್ದೇಶ ಅಧಿಕಾರದ ವಿಕೇಂದ್ರೀಕರಣವೇ ಆಗಿತ್ತು. ಇದರಿಂದಾಗಿ ಕರ್ನಾಟಕದಲ್ಲಿ ಸಾಮಾಜಿಕ ಬದಲಾವಣೆಗೆ ಕ್ರಾಂತಿ ಉಂಟುಮಾಡಿತು ಎಂದು ತಿಳಿಸಿದರು. ಉದಾ: ಒಬ್ಬ ಸಾಮಾನ್ಯ ಮಹಿಳೆ ಗ್ರಾಮ ಪಂಚಾಯತಿ ಅಧ್ಯಕ್ಷೆಯಾದ ಕತೆ. ತಿಮ್ಮಿ–ತಿಮ್ಮಕ್ಕ–ತಿಮ್ಮಮ್ಮ–ತಿಮ್ಮಮ್ಮನವರು ಆದ ಕಥೆ. ಹೀಗೆ ಗ್ರಾಮದ ಸಾಮಾನ್ಯ ಜನರು ಸಹ ಪಂಚಾಯತಿಯ ಅಧ್ಯಕ್ಷರಾಗುವಂತಹ ಸಾಮಾಜಿಕ ಬದಲಾವಣೆಯನ್ನು ಈ ತಿದ್ದುಪಡಿಯು ತಂದಿತು. ಮುಂದುವರೆದು ಪಂಚಾಯತಿಗಳ ಬಲವರ್ಧನೆಯ ಕುರಿತು ಮಾತನಾಡುತ್ತಾ ಈಗೀರುವ ಗ್ರಾಮ ಪಂಚಾಯತ್ ಉಪಸಮಿತಿಗಳು ಉತ್ತಮ ಕಾರ್ಯ ಮಾಡಬೇಕಿದೆ ಮತ್ತು ರಾಜ್ಯ ಅಭಿವೃದ್ಧಿ ಸಮಿತಿ, ಜಿಲ್ಲಾ ಅಭಿವೃದ್ಧಿ ಸಮಿತಿ, ತಾಲ್ಲೂಕು ಅಭಿವೃದ್ಧಿ ಸಮಿತಿ ಮತ್ತು ಗ್ರಾಮ ಅಭಿವೃದ್ಧಿ ಸಮಿತಿಯು ಹೆಚ್ಚು ಬಲವರ್ಧನೆ ಆಗಬೇಕು, ಗ್ರಾಮ ಸಭಾ, ವಾರ್ಡ್ ಸಭಾ ಶಕ್ತಿ ಹೆಚ್ಚಿಸುವ ಕೆಲಸ ಆಗಬೇಕು ಎಂದರು.

ಎರಡು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ ಮೊದಲನೇ ಪ್ಯಾನಲ್ ಚರ್ಚೆಯಲ್ಲಿ ಶ್ರೀ ಪ್ರಮೋದ್ ಹೆಗಡೆ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಡಾ. ಎಸ್.ಎಸ್.ಮೀನಾಕ್ಷಿಸುಂದರಂ ರವರು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಲಹೆಗಾರರಾದ ಶ್ರೀ ಕೆಂಪೇಗೌಡರವರು ಭಾರತದಲ್ಲಿ ಪಂಚಾಯತ್ ರಾಜ್‌ನ ಇತಿಹಾಸವನ್ನು ತಿಳಿಸಿದರು. ಸಂವಿಧಾನದ 73ನೇ ತಿದ್ದುಪಡಿಯ ಮೊದಲು ಹಾಗೂ ನಂತರದಲ್ಲಿ ಪಂಚಾಯತಿಗಳ ಬೆಳವಣಿಗೆಯನ್ನು ಕೂಲಂಕುಷವಾಗಿ ಚರ್ಚಿಸಿದರು.

ಎರಡನೇ ಪ್ಯಾನಲ್ ಚರ್ಚೆಯನ್ನು ಕೇರಳದ ಜೋಸ್ ಚಾತುಕುಲಂ, ನವದೆಹಲಿಯ ಪ್ರೊ.ವಿಎನ್ ಅಲೋಕ್ ಹಾಗೂ ಶ್ರೀ ವಿವೈ ಘೋರ್ಪಡೆಯವರು ನಡೆಸಿಕೊಟ್ಟರು. ಇದರಲ್ಲಿ ಪ್ರಧಾನವಾಗಿ ವಿಕೇಂದ್ರೀಕರಣದ ಸುತ್ತ ವಿಷಯಗಳನ್ನು ಮಂಡಿಸಿದರು. ಅಧಿಕಾರ, ಕಾರ್ಯಗಳು ಹಾಗೂ ಹಣಕಾಸು ಈ ಮೂರು ವಿಷಯಗಳಲ್ಲಿ ವಿಕೇಂದ್ರೀಕರಣದ ಸ್ವರೂಪ ಹೇಗಿದೆ ಎಂಬುದನ್ನು ವಿಷಧವಾಗಿ ಚರ್ಚಿಸಿದರು.

ಮೂರನೇ ಪ್ಯಾನಲ್ ಚರ್ಚೆಯನ್ನು ತಮಿಳುನಾಡಿನ ಗಾಂಧಿಗ್ರಾಮದ ಪ್ರೊ. ಪಳನಿದೊರೈ, ಕರ್ನಾಟಕ ಪಂಚಾಯತ್ ಪರಿಷತ್ತಿನ ಅಧ್ಯಕ್ಷರಾದ ಶ್ರೀ ನಾರಾಯಣ ಸ್ವಾಮಿ, ಮಾಜಿ ಶಾಸಕರಾದ ಶ್ರೀ ಡಿ.ಆರ್.ಪಾಟೀಲ್ ರವರು ಹಾಗೂ ಹೈದ್ರಾಬಾದಿನ ಪ್ರೊ.ಗೋಪಿನಾಥ ರೆಡ್ಡಿಯವರು ನಡೆಸಿಕೊಟ್ಟರು. ಈ ಗೋಷ್ಠಿಯಲ್ಲಿ ಪ್ರಧಾನವಾಗಿ ಪಂಚಾಯತಿಗಳು ಎದುರಿಸುತ್ತಿರುವ ಸವಾಲುಗಳನ್ನು ಹಾಗೂ ಅವುಗಳಿಗೆ ನಾವು ಕೈಗೊಳ್ಳಬಹುದಾದ ಕಾರ್ಯಗಳನ್ನು ಚರ್ಚಿಸಲಾಯಿತು. ಸರ್ಕಾರದ ಸ್ಟ್ಯಾಟೂಟ್ ನಲ್ಲಿರುವ ಎಲ್ಲಾ ಕಾರ್ಯಗಳನ್ನು ಪಂಚಾಯಿತಿಗಳಿಗೆ ವರ್ಗಾಯಿಸುವ ಮೂಲಕ ಪಂಚಾಯತಿಗಳನ್ನು ಬಲಪಡಿಸಬಹುದು ಎಂದು ಒಮ್ಮತವಾಗಿ ಅಭಿಪ್ರಾಯಪಟ್ಟರು. ಆದ್ದರಿಂದ ಅಧಿಕಾರವನ್ನು ವರ್ಗಾಯಿಸುವ ಪ್ರಕ್ರಿಯೆಯ ಕುರಿತು ಪ್ರಾಯೋಗಿಕ ಕಾರ್ಯಸೂಚಿಯನ್ನು ತಯಾರಿಸಬೇಕೆಂದು ಈ ಗೋಷ್ಠಿಯಲ್ಲಿ ನಿರ್ಣಯಿಸಲಾಯಿತು.

ಎರಡನೇ ದಿನದ ಸಂಜೆ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು. ಇದರ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಡಾ.ಎಸ್.ಎಸ್.ಮೀನಾಕ್ಷಿಸುಂದರಂ ರವರು ಭಾಗವಹಿಸಿದ್ದರು.

ಒಟ್ಟಿನಲ್ಲಿ ಸಂವಿಧಾನದ 73ನೇ ತಿದ್ದುಪಡಿಯ 30ನೇ ವರ್ಷದ ಹಾದಿಯಲ್ಲಿ ಪಂಚಾಯತಿಗಳು ಎಷ್ಟರ ಮಟ್ಟಿಗೆ ಬಲವರ್ಧನೆಯಾಗಬೇಕಿತ್ತೋ ಅಷ್ಟರ ಮಟ್ಟಿಗೆ ಆಗದಿರಲು ರಾಜಕೀಯ ಇಚ್ಛಾಶಕ್ತಿಯ ಕೊರತೆ ಎನ್ನುವುದು ಬಹುತೇಕರ ವಿಚಾರದ ಸತ್ವವಾಗಿತ್ತು. ಈ ಸಮಸ್ಯೆಯಿಂದ ಗ್ರಾಮಗಳನ್ನು ಮುಕ್ತಗೊಳಿಸಿದ ಸಬಲೀಕರಣ ಮಾಡಲು ಕಾಯ್ದೆಯಲ್ಲಿರುವಂತೆ ಅಧಿಕಾರಗಳನ್ನು ಸಂಪೂರ್ಣವಾಗಿ ಪಂಚಾಯತಿಗಳಿಗೆ ನೀಡಿದರೆ ಮಾತ್ರ ಸಾಧ್ಯ ಎನ್ನುವುದು ಸರ್ವವಿಧಿತ. ವ್ಯಾಜ್ಯ ಮುಕ್ತ ಹಾಗೂ ತ್ಯಾಜ್ಯ ಮುಕ್ತ ಗ್ರಾಮವು ನಮ್ಮ ಗುರಿಯಾಗಬೇಕು, ಸ್ವಾವಲಂಬಿ ಗ್ರಾಮಗಳು ಹೆಚ್ಚಾಗಬೇಕು ಎನ್ನವುದು ಎಲ್ಲರ ಆಶಯವಾಗಿತ್ತು.

***



# ಡಾ॥ ಬಾಬಾಸಾಹೇಬ ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನ ರಾಮ್‌ರವರ ಜಯಂತೋತ್ಸವದ ಅಂಗವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನದ ಕಾರ್ಯಾಗಾರ



ಡಾ. ಶ್ರೀಧರ ಹಾದಿಮನಿ
ಸಂಯೋಜಕರು
ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಓಬಿಸಿ ಕೋಶ
ಕ.ರಾ.ಗ್ರಾ. ಮತ್ತು ಪಂ. ರಾಜ್ ವಿಶ್ವವಿದ್ಯಾಲಯ, ಗದಗ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬಿಸಿ ಕೋಶದ ವತಿಯಿಂದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಜಗಜೀವನ್ ರಾಮ್ ಅವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಯಾವುದೇ ಒಂದು ಸಮುದಾಯಕ್ಕೆ ಸೀಮಿತರಲ್ಲ, ಅವರು ದೇಶಕ್ಕೆ ಸಂವಿಧಾನವನ್ನು ನೀಡಿದ ಸಮಿತಿಯ ಅಧ್ಯಕ್ಷರಾಗಿ, ಸಮಾಜಶಾಸ್ತ್ರಜ್ಞರಾಗಿ, ಅರ್ಥಶಾಸ್ತ್ರಜ್ಞರಾಗಿ, ಇತಿಹಾಸಕಾರರಾಗಿ ಹೀಗೆ ಅವರಿಗೆ ತಿಳಿಯದ ಕ್ಷೇತ್ರವಿರಲಿಲ್ಲ ಎಂದು ನುಡಿದರು. ಹಿಂದುಳಿದವರನ್ನು ಸಮಾಜದ ಮುಖ್ಯ ವಾಹಿನಿಗೆ ಕರೆತರುವ ಎಲ್ಲರ ಜೊತೆಗೆ ಕರೆದೊಯ್ಯುವ ಉದ್ದೇಶ ಅವರದಾಗಿತ್ತು ಅವರನ್ನು ಜ್ಞಾನದ ಮತ್ತು ಸಮಾನತೆಯ ಸಂಕೇತವಾಗಿ ವಿದ್ಯಾರ್ಥಿಗಳು ಅರಿಯಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಜಿ.ಬಿ.ನಂದನ ಅವರು ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ ರಾಮ್ ಅವರ ಜಯಂತಿ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಪ್ರಸ್ತುತ ಸ್ಪರ್ಧಾತ್ಮಕತೆ ಯುಗದ ಅರಿವಿನ ಮೂಡಿಸುತ್ತಿರುವುದರ ಜೊತೆಗೆ ಅವರ ಆದರ್ಶಗಳು, ಆಶಯಗಳು

ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಡಾ. ಜಗಜೀವನ್ ರಾಮ್ ಅವರ ಜಯಂತಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಂದ ಚಾಲನೆ



ಮುಂದಿನ ಪೀಳಿಗೆಯವರಿಗೂ ಚಿರಸ್ಥಾಯಿಯಾಗಿ ಉಳಿಸುವುದು ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಇವರುಗಳ ಅಧ್ಯಯನ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಅವರ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದರು.




ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಜಿ.ಬಿ.ನಂದನ ಅವರು ಮಾತನಾಡುತ್ತಿರುವುದು

ಕಾರ್ಯಕ್ರಮದಲ್ಲಿ ಗದಗ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀಮತಿ ವಿಜಯಲಕ್ಷ್ಮೀ ಇಂಗಳಹಳ್ಳಿ, ಪ್ರಾಧ್ಯಾಪಕರಾದ ಡಾ. ಎಂ. ಬಿ. ದಳಪತಿ ಅವರು ಉಪಸ್ಥಿತರಿದ್ದರು. ವಿಶ್ವವಿದ್ಯಾಲಯದ ಎಸ್ಸಿ, ಎಸ್.ಟಿ. ಮತ್ತು ಒಬಿಸಿ ಕೋಶದ ಸಂಯೋಜಕ ಡಾ ಶ್ರೀಧರ ಹಾದಿಮನಿ ಉಪನ್ಯಾಸಕರಾದ ಶ್ರೀ ಪ್ರವೀಣ್ ಅಂಕಲಕೋಟಿ, ಡಾ ಸಂತೋಷ, ಶ್ರೀ ನಿಂಗಪ್ಪ, ಶ್ರೀ ಪ್ರಕಾಶ ಮಾಚೇನಹಳ್ಳಿ, ಶ್ರೀ ಅಭಿಷೇಕ್, ಶ್ರೀ ಮಹೇಶ್ ಅಣ್ಣಿಗೇರಿ, ಶ್ರೀ ಲಿಂಗರಾಜ ನಿಡುವಣಿ ಹಾಗೂ ವಿದ್ಯಾರ್ಥಿಗಳ ವೃಂದ ಭಾಗಿಯಾಗಿದ್ದರು.

ಸಂಪನ್ಮೂಲ ವ್ಯಕ್ತಿ : **ಶ್ರೀ ಬಸವರಾಜ್**
ಗೌರವಾಧ್ಯಕ್ಷರು : **ಜೀನಿಯಸ್ ಅಕಾಡೆಮಿ ಧಾರವಾಡ**

ಕಾರ್ಯಗಾರದ ಎರಡನೇ ಅವಧಿಯಲ್ಲಿ ಶ್ರೀ ಬಸವರಾಜ್ ಅವರು ಕರ್ನಾಟಕ ನಾಗರೀಕ ಸೇವಾ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿಗಳಲ್ಲಿ ಪರೀಕ್ಷೆ ತಯಾರಿ ಆಸಕ್ತಿಯನ್ನು ಮೂಡಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಕಾಣಲು ಹೇಗೆ ರೂಪುರೇಷೆಗಳನ್ನು ಹಾಕಿಕೊಳ್ಳಬೇಕು ಯಾವ ಮಾರ್ಗಗಳನ್ನು ಅನುಸರಿಸಬೇಕು ಓದಿನಲ್ಲಿ ಆಸಕ್ತಿಯನ್ನು ಹೇಗೆ ಬೆಳೆಸಿಕೊಳ್ಳಬೇಕು ಸ್ಪರ್ಧಾತ್ಮಕ ಪರೀಕ್ಷೆಗಳ ಮುಖ್ಯವಾದ ಸಾಮಾನ್ಯ ಜ್ಞಾನವನ್ನು ದಿನನಿತ್ಯ ಜೀವನದಲ್ಲಿ ಹೇಗೆ ಪಡೆದುಕೊಳ್ಳಬೇಕು ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ತಯಾರಿಯ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಪಂಚಾಯತ್ ರಾಜ್ ಅಧಿನಿಯಮ 1993 73 ಮತ್ತು 74ನೇ ಕಾಯ್ದೆ ಪ್ರಮುಖ ಅಂಶಗಳನ್ನು ಹೇಗೆ ನೆನಪಿನಲ್ಲಿಟ್ಟುಕೊಳ್ಳುವುದು ಎಂದು ಪ್ರಾಯೋಗಿಕವಾಗಿ ತಿಳಿಸಿಕೊಟ್ಟರು. ಪೊಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಪೊಲೀಸ್ ಕಾನ್ಸಟೇಬಲ್ ಪಿಎಸ್ಐ ಹುದ್ದೆಗಳಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹೇಗೆ ನಮ್ಮನ್ನು ನಾವು ಸಜ್ಜುಗೊಳಿಸಬೇಕು ಎಂಬುದನ್ನು ತಿಳಿಸಿಕೊಟ್ಟರು ಸಾಮಾನ್ಯ ಪತ್ರಿಕೆ ಸಂಬಂಧಪಟ್ಟಂತೆ ವಿಷಯ ವಸ್ತುವನ್ನು ಹೇಗೆ ಕ್ರೋಢೀಕರಣ ಮಾಡಬೇಕು ಎಂಬುದನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳ ಸಂವಾದದಲ್ಲಿ ತಿಳಿಸಿಕೊಟ್ಟರು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾನ್ಯ ಕುಲಪತಿಯವರ ವಿಶೇಷ ಅಧಿಕಾರಗಳಾದ ಶ್ರೀ ಮಂಜುನಾಥ ಚನ್ನಪ್ಪಗೌಡರ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಕಡಿಮೆ ಆಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು ಹಾಗೂ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ಅವಶ್ಯಕ ಎಂದು ಹೇಳಿದರು. ಸ್ಪರ್ಧಾತ್ಮಕ ಪರೀಕ್ಷೆಯು ತಯಾರಿ ನಡೆಸುವ ಅಭ್ಯರ್ಥಿಗಳು ಯಾವಾಗಲೂ ಹೆಚ್ಚು ಹೆಚ್ಚು ಓದು ಮತ್ತು ಜ್ಞಾನ ಸಂಪಾದನೆಗೆ ಮಹತ್ವವನ್ನು ಕೊಡಬೇಕಾಗುತ್ತದೆ. ಆದರೆ ಇಂದಿನ ಯುವ ಸಮುದಾಯ ಅನ್ಯ ವಿಷಯಗಳಿಗೆ ಮಾರುಹೋಗಿ ಜೀವನದ ಅಮೂಲ್ಯ ಸಮಯವನ್ನು ವ್ಯರ್ಥ ಮಾಡ್ತಾ ಸಾಗಿಸುತ್ತಿದ್ದಾರೆ ಹಾಗಾಗಿ ಅವರು ಅಷ್ಟು ಬೇಗ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೇರ್ಗಡೆಯಾಗಲು ಸಾಧ್ಯವಾಗದೇ ಇರುವುದು ಕೂಡ ಒಂದು ಕಾರಣ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೆಬೇರೆ ಅಭಿಪ್ರಾಯಗಳನ್ನು ಮನದಲ್ಲಿಟ್ಟುಕೊಂಡು ಅಂದರೆ ಭ್ರಷ್ಟಾಚಾರ ಪಕ್ಷಪಾತ ಇಂತಹ ವಿಷಯಗಳಿಗೆ ಹೆಚ್ಚು ಗಮನ ಕೊಡುತ್ತಾ ಕಾಲಹರಣ ಮಾಡುವ ಸಂದರ್ಭವನ್ನು ತಂದುಕೊಳ್ಳುತ್ತಾರೆ ಕೊನೆಗೆ ಯಾವುದೇ ಪರೀಕ್ಷೆಯನ್ನು ಪಾಸು ಮಾಡಿದೆ ವ್ಯವಸ್ಥೆಯನ್ನು ಕೆಟ್ಟದಾಗಿ ಬಿಂಬಿಸಿ ತೋರಿಸುವ ಪ್ರಯತ್ನ ಮಾಡುತ್ತಾರೆ ಆದರೆ ಅದೆಲ್ಲವನ್ನೂ ಬದಿಗೊತ್ತಿ ಸತತ ಪ್ರಯತ್ನ ಪರಿಶ್ರಮದಿಂದ ಉನ್ನತ ಹುದ್ದೆಯನ್ನು ಸಾಕಷ್ಟು ಅವಕಾಶಗಳು ಗುರುತಿಸುವ ಪ್ರಯತ್ನ ವಿದ್ಯಾರ್ಥಿಗಳಲ್ಲಿ ಆಗಬೇಕು ಎಂದು ಹೇಳಿದರು.

## Student Participant list (Programme / Caste wise)

| SL | Programme | SC | | ST | | Total | | | Other | | | |
|---|---|---|---|---|---|---|---|---|---|---|---|---|
| | | II | IV | I | IV | SC | ST | Total | I | IV | Total | |
| 1 | MA –RDPR | 23 | 03 | 01 | 01 | 13 | 02 | 15 | 04 | 01 | 05 | |
| 2 | MA-PA | 05 | 04 | 01 | 00 | 09 | 01 | 10 | 05 | 02 | 07 | |
| 3 | MA-DE | 10 | 02 | 01 | 00 | 12 | 01 | 13 | 06 | 03 | 09 | |
| 4 | MSW | 12 | 03 | 05 | 02 | 15 | 07 | 22 | 10 | 08 | 18 | |
| 5 | M.Com | 06 | 03 | 01 | 04 | 09 | 05 | 14 | 18 | 14 | 32 | |
| 6 | Msc-FST | 06 | 00 | 02 | 00 | 06 | 02 | 08 | 12 | 14 | 26 | |
| 7 | Msc-CS | 01 | 02 | 00 | 01 | 03 | 01 | 04 | 07 | 10 | 17 | |
| 8 | MSc-GIS | 03 | 04 | 00 | 02 | 07 | 02 | 09 | 08 | 02 | 10 | |
| 9 | MPH | 02 | 02 | 00 | 00 | 02 | 00 | 02 | 02 | 04 | 06 | |
| 10 | MBA | 02 | 03 | 00 | 00 | 05 | 00 | 05 | 13 | 10 | 23 | |
| | | **55** | **26** | **11** | **10** | **81** | **21** | | **85** | **68** | **153** | |
| | Total | **82** | | **20** | | | | **(SC, ST) 102** | **102+153** | | | **255** |

# ಗ್ರಾಮಗಳಲ್ಲಿ ಆರೋಗ್ಯದ ಸ್ಥಿತಿಗತಿ ಮತ್ತು ಸುಧಾರಣಾ ಕ್ರಮಗಳು



**ಕುಮಾರಿ ಮಮತಾ ಚಂದ್ರಪ್ಪ ಹರಿಜನ**
ದ್ವಿತೀಯ ವರ್ಷ,
ಸಮಾಜ ಕಾರ್ಯ ಮತ್ತು
ಸಾರ್ವಜನಿಕ ಆರೋಗ್ಯ ವಿಭಾಗ

ಈ ಲೇಖನವು ಪ್ರಸ್ತುತ ಗ್ರಾಮೀಣ ಭಾಗಗಳಲ್ಲಿರುವ ಆರೋಗ್ಯದ ಗುಣಮಟ್ಟವನ್ನು ಮತ್ತು ಅದರ ಬೆಳವಣಿಗೆಗೆ ಕೈಗೊಳ್ಳಬಹುದಾದ ಸಾರ್ವಜನಿಕ ಹಾಗೂ ಸರಕಾರಿ ಸೌಲಭ್ಯಗಳ ಕುರಿತು ಅಧ್ಯಯನ ಮಾಡುವುದರ ಜೊತೆಗೆ ಗ್ರಾಮಗಳಲ್ಲಿ ವಾಸಿಸುವ ಜನರ ಆರೋಗ್ಯಯುತ ಜೀವನ ಮಟ್ಟವನ್ನು ಅರಿತುಕೊಳ್ಳುವ ಒಂದು ಪ್ರಯತ್ನವಾಗಿದೆ. ಈ ವಿಷಯಗಳ ಮಹತ್ವವನ್ನು ಅರಿತುಕೊಳ್ಳುವ ಮೊದಲು ಗ್ರಾಮಗಳ ಸ್ವರೂಪ, ಲಕ್ಷಣಗಳ ಕುರಿತು ತಿಳಿಯಲು ಪ್ರಯುತ್ನಿಸಲಾಗಿದೆ. ಸಾಮಾನ್ಯವಾಗಿ ಗ್ರಾಮವನ್ನು ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ' ಕೃತಿಯಲ್ಲಿ 'ಖೇಡ' ಎಂದು ಉಲ್ಲೇಸುತ್ತಾರೆ. ಹಿಂದಿಯಲ್ಲಿ 'ಗಾಂವ್', ಸಂಸ್ಕೃತದಲ್ಲಿ 'ಗ್ರಾಮೀಣಾ', ಕನ್ನಡ ಶಾಸ್ತ್ರೀಯ ಭಾಷೆಯಲ್ಲಿ 'ಹಳ್ಳಿ' ಎಂದೂ ಅನೇಕ ಉಪನಾಮಗಳಿಂದ ಕರೆಯುತ್ತಾರೆ.

ಸುಮಾರು ಐದು ಸಾವಿರ ಜನಸಂಖ್ಯೆಯನ್ನು ಮೀರದ ಜನರು ವಾಸಿಸುವ ಪ್ರದೇಶಕ್ಕೆ ಗ್ರಾಮ ಎಂದು ಕರೆಯುತ್ತಾರೆ. ನಮ್ಮ ದೇಶದಲ್ಲಿ ಸರಿ ಸುಮಾರು 15 ಲಕ್ಷಕ್ಕಿಂತ ಹೆಚ್ಚು ಗ್ರಾಮಗಳಿವೆ. ಪುರಾತನ ಕಾಲದಿಂದಲೂ ಹಳ್ಳಿಗಳು ಸುಂದರವಾದ ಮತ್ತು ಆರೋಗ್ಯದಾಯಕವಾದ ಸ್ಥಳಗಳಾಗಿದ್ದವು. ನದಿ, ಕೆರೆ, ಹಳ್ಳಗಳಂತಹ ನೀರಿನ ಸೌಲಭ್ಯವುಳ್ಳ ಪ್ರದೇಶದಲ್ಲಿ ಹಸಿರಿನ ವಾತಾವರಣವನ್ನು ಸೃಷ್ಟಿ ಮಾಡಿಕೊಂಡು ಉತ್ತಮ ಬದುಕನ್ನು ನಿರ್ಮಿಸಿಕೊಂಡರು. ಈ ಪ್ರದೇಶದಲ್ಲಿ ವಾಸಿಸುವ ಜನರ ಮೂಲ ಕಸುಬು ಕೃಷಿ. ಇವರು ಸಮುದಾಯ ಜೀವನ ಕ್ರಮವನ್ನು ರೂಢಿಸಿಕೊಂಡಿರುತ್ತಾರೆ. ಸಾಂಪ್ರದಾಯಿಕ ಹಬ್ಬ ಹರಿದಿನಗಳು, ಆಚರಣೆಗಳು ಇವರ ಮದ್ಯೆ ಬೆಸೆದುಕೊಂಡಿರುತ್ತವೆ. ಇಲ್ಲಿನ ಜನರು ತಮ್ಮ ಹಿಂದಿನ ತಲೆಮಾರಿನವರಿಂದ ಬಳುವಳಿಯಾಗಿ ಬಂದ ಸಂಸ್ಕೃತಿಯನ್ನು ಪಾಲಿಸಿಕೊಂಡು ಹೋಗುತ್ತಾರೆ. ಸರಳವಾದ ಬದುಕನ್ನು ಸಾಗಿಸುವುದರ ಜೊತೆಗೆ ಶ್ರಮಜೀವಿಗಳು. ಕೃಷಿಗೆ ಪೂರಕವಾದ ಅನೇಕ ಕೌಶಲ್ಯಾಧಾರಿತ ಕುಲ ಕಸುಬುಗಳಲ್ಲಿ ಭಾಗಿಯಾಗಿರುತ್ತಾರೆ. ಒಟ್ಟಿನಲ್ಲಿ ಹಳ್ಳಿಗಳಲ್ಲಿ ಒಬ್ಬರಿಗೊಬ್ಬರು ಸಹಕಾರ ಮತ್ತು ಸಹಾನುಭೂತಿಯಿಂದ ಜೀವನ ಸಾಗಿಸಿಕೊಂಡು ಬಂದವರು.



## ಗ್ರಾಮಗಳ ಸ್ವರೂಪ ಮತ್ತು ಲಕ್ಷಣಗಳು :

ಗ್ರಾಮಗಳು ಕೆಲವು ನಿರ್ದಿಷ್ಟವಾದ ಲಕ್ಷಣವನ್ನು ಹೊಂದಿರುತ್ತವೆ. ಅವುಗಳ ಮೂಲಕ ಆ ಪ್ರದೇಶ ಮಹತ್ವವನ್ನು ಪಡೆದುಕೊಂಡಿರುತ್ತದೆ. ಊರ ಪ್ರವೇಶವಾದಾಗ ವಿಶಾಲವಾದ ಅರಳಿ ಮರ, ಅದರ ಪಕ್ಕದಲ್ಲಿ ಚಹಾ ಅಂಗಡಿಗಳು, ಅವುಗಳ ಪಕ್ಕ ಬಸ್ ತಂಗುದಾಣ. ನೂರಾರು ಜನರು ತಮ್ಮ ತೋಟಗಳಲ್ಲಿ ಕೆಲಸ ಮಾಡಲು ಹಸು, ಎತ್ತುಗಳೊಂದಿಗೆ ಹೋಗುವ ದೃಶ್ಯಗಳೆಲ್ಲವೂ ಹಳ್ಳಿಯ ಚಿತ್ರಣವನ್ನು ಕಟ್ಟಿಕೊಡುತ್ತವೆ. ಹೀಗೆ ಸುಂದರವಾದ ವಾತಾವರಣ ಹೊಂದಿರುವ ಗ್ರಾಮಗಳ ಸ್ವಭಾವವನ್ನು ತಿಳಿಯಲು ಪ್ರಯತ್ನಿಸಿದಾಗ ಹಲವು ಅಂಶಗಳು ಅಂತರ್ಗತವಾಗಿರುವುದು ತಿಳಿದು ಬರುತ್ತದೆ. ಅವುಗಳಲ್ಲಿ ಕೆಲವನ್ನು ಈ ಮುಂದಿನಂತೆ ಪಟ್ಟಿ ಮಾಡಲಾಗಿದೆ.

1. **ಕೃಷಿ ಅವಲಂಬಿತ ಕುಟುಂಬಗಳು :** ಗ್ರಾಮಗಳಲ್ಲಿ ಪ್ರತಿಶತ 90% ಕುಟುಂಬಗಳು ಕೃಷಿಯನ್ನು ಕುಲಕಸುಬನ್ನಾಗಿ ಆಯ್ದುಕೊಂಡಿರುತ್ತಾರೆ. ಇದರಿಂದ ಬರುವ ಆದಾಯದಲ್ಲಿ ತಮ್ಮ ಜೀವನ ಸಾಗಿಸುತ್ತಾರೆ. ಇಡಿ ನಾಡಿನ ಜನತೆಗೆ ಆಹಾರ ಧಾನ್ಯಗಳನ್ನು ಬೆಳೆದು ಲಕ್ಷಾಂತರ ಜನರ ಹಸಿವನ್ನು ನೀಗಿಸುತ್ತಾರೆ.
2. **ಅವಿಭಕ್ತ ಕುಟುಂಬಗಳು :** ಗ್ರಾಮೀಣ ಮಟ್ಟದಲ್ಲಿ ಇವತ್ತಿಗೂ ಅವಿಭಕ್ತ ಕುಟುಂಬಗಳು ವಾಸವಾಗಿರು ವುದನ್ನು ಕಾಣಬಹುದು. ಇವರ ಮಧ್ಯ ಸಾಮರಸ್ಯ ಮತ್ತು ಹೊಂದಾಣಿಕೆ ಬಹಳ ಮುಖ್ಯ ಪಾತ್ರ ವಹಿಸುವುದರಿಂದ ಸಮಾಜದಲ್ಲಿ ಗುರುತಿಸಿ ಕೊಳ್ಳುತ್ತಾರೆ.
3. **ಸಾಮಾಜಿಕ ಆಚರಣೆ ಮತ್ತು ಕಟ್ಟುಪಾಡು :** ಗ್ರಾಮಗಳಲ್ಲಿ ಕೆಲವು ಪರಂಪರಾಗತವಾದ ಆಚರಣೆಗಳನ್ನು ಆಚರಿಸುತ್ತ ಬಂದಿರುತ್ತಾರೆ. ಅವುಗಳಲ್ಲಿ ಜಾತಿ-ಧರ್ಮ, ಅಂತಸ್ತು-ಮೇಲು ಕೀಳು ಎಂಬ ಯಾವ ಭಾವನೆಗಳು ಪ್ರವೇಶಿಸಿದಂತೆ ನೋಡಿಕೊಳ್ಳುತ್ತಾರೆ. ಗ್ರಾಮ ದೇವಿಯರ ಉತ್ಸವ, ಪುರುಷ ದೈವಗಳ ಪಲ್ಲಕ್ಕಿ ಮೆರವಣಿಗೆಯಂತಹ ಉತ್ಸವಗಳು ನಡೆಯುವ ಕೆಲವು ವಿಶೇಷವಾದ ದಿನಗಳಲ್ಲಿ ಊರಿನಲ್ಲಿ ಕಠಿಣವಾದ ನಿಯಮಗಳನ್ನು ಪಾಲಿಸುವಂತೆ ಆದೇಶ ನೀಡುತ್ತಾರೆ. ಇದಕ್ಕೆ 'ವಾರ' ಬಿಡುವುದು ಎನ್ನುತ್ತಾರೆ.

## ಗ್ರಾಮಗಳಲ್ಲಿ ನೈರ್ಮಲ್ಯ ಜಾಗೃತಿ ಕಾರ್ಯಕ್ರಮಗಳು :

ಗ್ರಾಮಗಳಲ್ಲಿ ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ಸರ್ಕಾರದ ಮಟ್ಟದಲ್ಲಿ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತರಲಾಗಿದೆ. ಸ್ವಚ್ಛತೆ ನಮ್ಮೆಲ್ಲರ ಮೊದಲ ಆಧ್ಯತೆಯಾಗಬೇಕು. ಸ್ವಚ್ಛತೆಯಿದ್ದಲ್ಲಿ ಆರೋಗ್ಯ ವೃದ್ಧಿಸಲು ಹಾಗೂ ಸುಧಾರಿಸಲು ಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ, ದಿನ ಬಳಕೆಗೆ ಬಳಸುತ್ತಿರುವ ಪ್ಲಾಸ್ಟಿಕ್ ವಸ್ತುಗಳು ಹಾಗೂ ಸಾರ್ವಜನಿಕರ ಬೇಜವಾಬ್ದಾರಿಯುತ ನಡೆ ಇವೆಲ್ಲವು ಅನೈರ್ಮಲ್ಯಗೊಳ್ಳಲು ಪ್ರಮುಖ ಕಾರಣವಾಗುತ್ತಿದೆ. ಈ ಸಮಸ್ಯೆಯನ್ನು ಹೋಗಲಾಡಿಸಲು ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಜಾರಿಗೆ ತಂದಿವೆ. ಅವುಗಳ ಸಂಕ್ಷಿಪ್ತ ಪರಿಚಯವನ್ನು ಈ ಮುಂದಿನಂತೆ ನೋಡಬಹುದು.

1. **ಸ್ವಚ್ಛ ಭಾರತ್ ಮಿಷನ್ :** ಈ ಯೋಜನೆಯು ಕೇಂದ್ರ ಸರ್ಕಾರದ ಪ್ರಮುಖ ಅಂಶಗಳಲ್ಲಿ ಹೆಚ್ಚಿನ ಮಹತ್ವವನ್ನು ಈ ಯೋಜನೆಗೆ ನೀಡಲಾಗಿದೆ. ಇದು ಮಹಾತ್ಮಾ ಗಾಂಧಿಯವರ ಆಶಯದಂತೆ ಭಾರತ ದೇಶವನ್ನು ಸ್ವಚ್ಛ, ಸುಂದರ ಹಾಗೂ ನೈರ್ಮಲ್ಯ ದೇಶವನ್ನಾಗಿ ಮಾರ್ಪಡಿಸಲು ದೇಶದ ಪ್ರಧಾನಿ ಗೌರವಾನ್ವಿತ ಶ್ರೀ ನರೇಂದ್ರ ಮೋದಿಯವರು 2014ರಲ್ಲಿ "ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ" ಎಂಬ ಧ್ಯೆಯ ವಾಕ್ಯದೊಂದಿಗೆ ಜಾರಿಗೆ ತರಲಾಗಿದೆ. ಈ ಯೋಜನೆಯು ಶೌಚಾಲಯ ನಿರ್ಮಾಣ, ರಸ್ತೆಗಳ ಶುಚಿತ್ವ ಮತ್ತು ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಾಗಿದೆ. ಪ್ರತಿ ವರ್ಷ ಅಂತರರಾಜ್ಯ ಮಟ್ಟದಲ್ಲಿ ನೈರ್ಮಲ್ಯವುಳ್ಳ ರಾಜ್ಯಗಳಿಗೆ ಪ್ರಶಸ್ತಿಯನ್ನು ಕೂಡ ನೀಡಲಾಗುತ್ತದೆ. ಈ ಯೋಜನೆ ಅಡಿಯಲ್ಲಿ ಪ್ರಥಮ ಬಹುಮಾನ ಪಡೆದ ರಾಜ್ಯವೆಂದರೆ, ಅಸ್ಸಾಂ. ಇತ್ತೀಚೆಗೆ ಕರ್ನಾಟಕದ ಮೈಸೂರು ಜಿಲ್ಲೆ ಕರ್ನಾಟಕದಲ್ಲಿಯೇ ಅತ್ಯಂತ ನೈರ್ಮಲ್ಯಯುಕ್ತ ಗ್ರಾಮ ಎಂಬ ಅಭಿದಾನಕ್ಕೆ ಪಾತ್ರವಾಗಿದೆ.
2. **ನಿರ್ಮಲ ಗ್ರಾಮ ಯೋಜನೆ ಮತ್ತು ಸ್ವಚ್ಛ ಗ್ರಾಮ ಯೋಜನೆ :** ನಗರ ಹಾಗೂ ಗ್ರಾಮಗಳು ದೇಶದ ಪ್ರಮುಖ ಅಂಗಗಳು ಈ ಕಾರಣಕ್ಕೆ ನಮ್ಮ ಕರ್ನಾಟಕ ಸರ್ಕಾರದಿಂದ ಹೆಚ್ಚಿನ ಆಸ್ಥೆಯನ್ನು ವಹಿಸಿ ಪ್ರತಿ ಜಿಲ್ಲೆಗೂ ಕಸ ವಿಲೇವಾರಿ ವಾಹನ ವ್ಯವಸ್ಥೆಯನ್ನು ಮಾಡಲಾಗಿದೆ. ಇವುಗಳ ಮೂಲಕ ಹಸಿ ಕಸ ಮತ್ತು ಒಣ ಕಸಗಳನ್ನು ವಿಂಗಡಿಸಿದ

ಮೇಲೆ ಆ ತ್ಯಾಜ್ಯವನ್ನು ಸಂಗ್ರಹಿಸುವ ಕಾರ್ಯವನ್ನು ಮಾಡುತ್ತಿರುವುದರಿಂದ ಅತ್ಯಂತ ಪರಿಣಾಮಕಾರಿ ಅಲ್ಲದಿದ್ದರೂ ಸ್ವಚ್ಛತೆ ಕಾಯ್ದುಕೊಳ್ಳುವಲ್ಲಿ ಒಂದು ಪ್ರಯತ್ನವಂತೂ ನಡೆದಿದೆ. ಇತ್ತೀಚೆಗೆ ಪ್ರತಿಯೊಂದು ಮನೆಯಲ್ಲೂ ಇದರ ಬಗ್ಗೆ ಆಸಕ್ತಿ ಮೂಡಿದ್ದು ತ್ಯಾಜ್ಯ ವಿಂಗಡಿಸುವ ಪರಿಪಾಠ ಮೂಡಿ ಬರುತ್ತಿದೆ. ಗ್ರಾಮಗಳಲ್ಲಿ ಸ್ವಚ್ಛತೆಯ ಒಂದು ಅಂಗವಾದ ಬಯಲು ಮಲ ವಿಸರ್ಜನೆಯನ್ನು ಮುಕ್ತಗೊಳಿಸುವ ಯೋಜನೆಯ ಭಾಗವಾಗಿ ಪ್ರತಿಯೊಂದು ಗ್ರಾಮಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಸರ್ಕಾರ ಹಣಕಾಸಿನ ನೆರವನ್ನು ನೀಡುತ್ತದೆ. ಈ ಯೋಜನೆಯ ಪರಿಣಾಮವಾಗಿ ಶೇಖಡಾ 75% ಅಧಿಕ ಗ್ರಾಮಗಳು ಶೌಚಾಲಯ ಹೊಂದಿವೆ. ಸ್ವಚ್ಛತೆಯ ದೃಷ್ಟಿಯಿಂದ ಸರ್ಕಾರದ ಕಾರ್ಯಕ್ರಮ ಯಶಸ್ವಿಯಾಗಿದೆ ಎನ್ನಬಹುದು.

**ಈ ಯೋಜನೆಗಳ ಉದ್ದೇಶಗಳು :**

- ಪ್ರತಿಯೊಬ್ಬರೂ ವಯುಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳುವುದು. ಶೌಚಾಲಯ ನಿರ್ಮಾಣ ಕೆಲಸಕ್ಕೆ ಪಂಚಾಯತಿ ವತಿಯಿಂದ ಸಹಾಯಧನ ನೀಡುವುದು. ಈ ಯೋಜನೆಗಳನ್ನು ಸದುಪಯೋಗಪಡಿಸಿಕೊಂಡ ಗ್ರಾಮಕ್ಕೆ ಗಾಂಧಿ ಸ್ವಚ್ಛಗ್ರಾಮ ಪುರಸ್ಕಾರ ನೀಡಿ ಪ್ರೋತ್ಸಾಹಿಸುವುದು.
- ಗ್ರಾಮೀಣ ಜನರಿಗೆ ಶುಚಿತ್ವದ ಮಹತ್ವವನ್ನು ಸಾರುವ ಬಿತ್ತಿ ಪತ್ರಗಳು, ಬೀದಿ ನಾಟಕಗಳನ್ನು ಪ್ರದರ್ಶಿಸುವುದು. ಅಲ್ಲಿ ವಾಸಿಸುವ ಮಕ್ಕಳಿಗೆ ಹಾಗೂ ಹಿರಿಯರಿಗೆ ಶಿಕ್ಷಣ ನೀಡುವ ಮೂಲಕ ಮಹಿಳೆಯರ ಶುಚಿತ್ವ (ಮುಟ್ಟಿನ ಸಂದರ್ಭದಲ್ಲಿ ನಿರ್ವಹಿಸಬೇಕಾದ ಕ್ರಮಗಳು) ನೈರ್ಮಲ್ಯದ ಕುರಿತಾಗಿ ಅರಿವು ಮೂಡಿಸುವುದು.
- ಜನರ ಸಹಭಾಗಿತ್ವದಲ್ಲಿ ವಾರ್ಡ ಮಟ್ಟದಲ್ಲಿ ಹಾಗೂ ಗ್ರಾಮ ಮಟ್ಟದಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಆಶಾ ಕಾರ್ಯಕರ್ತೆಯರ ಮೂಲಕ ಶುಚಿತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು.

ಈ ಯೋಜನೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಲ್ಲಿ ಅಧಿಕಾರಿಗಳ ಆಸಕ್ತಿ ಮತ್ತು ಸಾರ್ವಜನಿಕರ ಸಹಭಾಗಿತ್ವ ಅತ್ಯಂತ ಪ್ರಮುಖ ವಾದದ್ದು. ಸರ್ಕಾರಿ ಅಧಿಕಾರಿಗಳೇ ಎಲ್ಲವನ್ನು ನೋಡಿಕೊಳ್ಳಬೇಕು ಎಂಬ ಮನೋಸ್ಥಿತಿಯನ್ನು ಬಿಟ್ಟಾಗ ಮಾತ್ರ ಗ್ರಾಮಗಳು ಸ್ವಚ್ಛ ಹಾಗೂ ಸುಂದರವಾದ ಪರಿಸರವನ್ನು ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರ ಸಹಭಾಗಿತ್ವ ಮುಖ್ಯವಾಗುತ್ತದೆ.

**ಗ್ರಾಮಗಳಲ್ಲಿ ಕಂಡು ಬರುವ ಆರೋಗ್ಯ ಸಮಸ್ಯೆಗಳು :**

'ಆರೋಗ್ಯವೇ ಭಾಗ್ಯ" ಎಂಬ ನಾಣ್ಣುಡಿ ಯಂತೆ ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ಆರೋಗ್ಯದ ಸ್ಥಿತಿಗತಿಯೂ ಕೂಡ ಪ್ರಭಾವವನ್ನು ಬೀರುತ್ತದೆ. ದೇಶದ ಅಭಿವೃದ್ಧಿಯಲ್ಲಿ ಮಾನವ ಶಕ್ತಿಯ ಕೊಡುಗೆ ಪ್ರಮುಖವಾಗುತ್ತದೆ. ಸಂಪನ್ಮೂಲಗಳ ಸದ್ಬಳಕೆ ಮತ್ತು ಉತ್ಪಾದನೆಯಾದ ವಸ್ತುಗಳನ್ನು ಸರಿಯಾದ ಕ್ರಮದಲ್ಲಿ ಉಪಬೋಗಿಸುವ ಜನರಿದ್ದಾಗ ಮಾತ್ರ ಆ ದೇಶದ ಆರ್ಥಿಕತೆ ಸುಭದ್ರವಾಗಿರುತ್ತದೆ. ಆರೋಗ್ಯಕ್ಕೆ ಇಷ್ಟೊಂದು ಮಹತ್ವ ಇದ್ದಾಗಲೂ ಗ್ರಾಮೀಣ ಪ್ರದೇಶಗಳಲ್ಲಿ ಇತ್ತಿಚೆಗೆ ಆರೋಗ್ಯ ಸಮಸ್ಯೆಗಳು ಸಾಮಾನ್ಯ ಎನ್ನುವಂತಾಗಿದೆ. ಅಂತಹ ಕೆಲವು ರೋಗ ಲಕ್ಷಣಗಳು ಮತ್ತು ಪರಿಹಾರೋಪಾಯಗಳನ್ನು ಈ ಮುಂದಿನಂತೆ ಅಧ್ಯಯನಿಸಬಹುದು.

- **ಸಾಮಾನ್ಯ ರೋಗಗಳು :** ಋತುಮಾನಕ್ಕೆ ತಕ್ಕಂತೆ ಕೆಲವು ಸಾಮಾನ್ಯ ರೋಗಗಳು ಕಂಡು ಬರುತ್ತವೆ. ಅವುಗಳೆಂದರೆ, ಜ್ವರ, ವಾಂತಿ-ಬೇದಿ, ಕಾಲರಾ, ಮಲೇರಿಯಾ, ಕ್ಷಯರೋಗ. ಇತ್ತಿಚೆಗೆ ಇಡೀ ಜಗತ್ತನ್ನೆ ಆವರಿಸಿ ಮಾನವ ಸಂಕುಲಕ್ಕೆ ಕಂಟಕವನ್ನುಂಟು ಮಾಡಿದ್ದ 'ಕೋವಿಡ್' ಭೀಕರವಾದ ಸಾಂಕ್ರಾಮಿಕ ರೋಗ ಹಾಗೂ ಅತ್ಯಂತ ವೇಗವಾಗಿ ಹರಡಿದ ಕಣ್ಣು ಬೇನೆ 'ಮದ್ರಾಸ ಆಯ್' ಎಂಬ ಅನಾರೊಗ್ಯ ಸಮಸ್ಯೆಗಳು ಪ್ರಾರಂಭದಲ್ಲಿ ಪರಿಣಾಮಕಾರಿಯಾಗಿದ್ದರೂ ಕ್ರಮೇಣ ನಿಯಂತ್ರಣಕ್ಕೆ ಬರುತ್ತವೆ.
- **ಕಾರಣಗಳು :** ಈ ಎಲ್ಲ ರೋಗಗಳಿಗೆ ಪ್ರಮುಖವಾದ ಕಾರಣವೆಂದರೆ, ಸ್ವಚ್ಛತೆ ಇಲ್ಲದೆ ಇರುವುದು. ನಾವು ವಾಸಿಸುವ ಸುತ್ತಮುತ್ತಲಿನ ಪರಿಸರದಲ್ಲಿ ತ್ಯಾಜ್ಯವನ್ನು ಸುರಿಯುವುದು. ಇದರಿಂದಾಗಿ ವಾತಾವರಣದಲ್ಲಿ ರೋಗವನ್ನು ಹರಡುವ ಸೂಕ್ಷ್ಮಾಣು ಜೀವಿಗಳು ಹಾಗೂ ವೈರಸ್‌ಗಳು ಗಾಳಿಯ ಮೂಲಕ ಮತ್ತು ನೀರಿನ ಮೂಲಕ ನಾವು ಸೇವಿಸುವ ಆಹಾರದ ಮೂಲಕ ಜನರಿಗೆ ಅನಾರೋಗ್ಯವನ್ನುಂಟು ಮಾಡುತ್ತವೆ. ಪ್ರಕೃತಿಯಲ್ಲಾಗುವ ಮಳೆಗಾಲ, ಬೇಸಿಗೆಕಾಲ ಮತ್ತು ಚಳಿಗಾಲ ಪ್ರಾರಂಭವಾಗುವ ಮುಂಚೆ ಹವಾಮಾನ ವೈಪರಿತ್ಯದಿಂದ ರೋಗಗಳು ಬರುತ್ತವೆ.
- 

* **ಪರಿಹಾರೋಪಾಯಗಳು ಮತ್ತು ಮುನ್ನೆಚ್ಚರಿಕೆ ಕ್ರಮಗಳು :** ಅನಾರೋಗ್ಯಕ್ಕೆ ಒಳಗಾಗುವದಕ್ಕಿಂತ ಮುಂಚೆ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ ಈ ಕಾರಣಕ್ಕೆ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳುವುದು ನಮ್ಮ ಆದ್ಯತೆ ಯಾಗಬೇಕು. ಋತುಮಾನಕ್ಕೆ ಅನುಸಾರ ನಮ್ಮ ಪಾರಂಪರಿಕ ಆಹಾರಗಳನ್ನು ಸೇವಿಸಬೇಕು. ವೈದ್ಯರ ಮೊರೆ ಹೋಗುವುದನ್ನು ತಪ್ಪಿಸಲು ಮನೆಯಲ್ಲಿಯೇ ಆರೋಗ್ಯಪೂರ್ಣವಾದ ಧಾನ್ಯಗಳು ಹಾಗೂ ಆಹಾರ ಸೇವಿಸುವುದರಲ್ಲಿ ಕ್ರಮವನ್ನು ಅನುಸರಿಸುವುದು ಸೂಕ್ತವಾಗುತ್ತದೆ.

### ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳು :

ಜನಸಾಮಾನ್ಯರಿಗೆ ವೈದ್ಯರ ಸೇವೆಗಳನ್ನು ಹಾಗೂ ಒಳರೋಗಿಗಳಿಗೆ ಸೇವೆಯನ್ನು ಒದಗಿಸುವ ಮೊದಲ ಹಂತವೇ ಪ್ರಾಥಮಿಕ ಆರೋಗ್ಯ ಕೇಂದ್ರಗಳು. ಜಿಲ್ಲಾ ಕೇಂದ್ರಗಳನ್ನು ಹೊರತು ಪಡಿಸಿ ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ. ಸುಮಾರು ಇಪ್ಪತ್ತು ಸಾವಿರ ಜನಸಂಖ್ಯೆಯಿಂದ ಮೂವತ್ತು ಸಾವಿರ ಜನಸಂಖ್ಯೆ ಯುಳ್ಳ ಪ್ರದೇಶದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯವನ್ನು ನಿರ್ವಹಿಸುತ್ತದೆ. ಸುಸಜ್ಜಿತವಾದ ಕಟ್ಟಡ, ಸಮರ್ಪಕವಾದ ವೈದ್ಯರು ಹಾಗೂ ಕನಿಷ್ಠ ಮಟ್ಟದ ಸೇವಾ ಸಿಬ್ಬಂದಿಗಳನ್ನು ಒಳಗೊಂಡಿರುತ್ತದೆ.

ನಗರ ಪ್ರದೇಶದಿಂದ ಕೆಲವು ಕಿಲೋಮೀಟರ ಗಳಲ್ಲಿ ಕಾರ್ಯ ನಿರ್ವಹಿಸುವ ಆರೋಗ್ಯ ಕೇಂದ್ರಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತವೆ. ಕಾರಣವೆಂದರೆ, ಸಾರಿಗೆ ವ್ಯವಸ್ಥೆ ವೈದ್ಯ ಪರಿಕರಗಳ ಪೂರೈಕೆಯಲ್ಲಿ ವ್ಯತ್ಯಯ ಕಂಡು ಬರುವುದಿಲ್ಲ. ಗ್ರಾಮಗಳಲ್ಲಿ ಉತ್ಕೃಷ್ಟದ ಸೇವೆ ಲಭ್ಯವಿದ್ದರೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬರುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಇವುಗಳ ಸೇವೆ ಕನಸಿನ ಮಾತಿನಂತಾಗಿದೆ. ಬಡವರು, ಕೂಲಿ ಕಾರ್ಮಿಕರು ಹಾಗೂ ರೈತರಿಗೆ ನಿರಾಶಾದಾಯಕ ಅನುಭವ ವಾಗುತ್ತಿದೆ. ಕಾರಣ ಗ್ರಾಮಗಳು ಕೃಷಿ ಪ್ರಧಾನ ಕುಟುಂಬಗಳಾಗಿದ್ದು, ಆದಾಯಕ್ಕಿಂತ ಅಧಿಕ ನಷ್ಟವನ್ನೆ ಅನುಭವಿಸುತ್ತಾರೆ. ನಿರ್ದಿಷ್ಟ ಮಾಸಿಕ ವೇತನ ಅಥವಾ ಆದಾಯವನ್ನು ಹೊಂದದೆ ಇರುವುದರಿಂದ ಅನಾರೋಗ್ಯಕ್ಕೆ ಒಳಗಾದಾಗ ಖಾಸಗಿ ಆಸ್ಪತ್ರೆಗಳಿಗಿಂತ ಸರ್ಕಾರಿ ಆರೋಗ್ಯ ಕೇಂದ್ರಗಳತ್ತ ಪರೀಕ್ಷೆಗೆ ಹೋಗುತ್ತಾರೆ.

ಆರೋಗ್ಯ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವ ವೈದ್ಯರ ಗೈರು ಹಾಗೂ ವೈದ್ಯರ ನೇಮಕಾತಿಯಲ್ಲಿ ಉಂಟಾಗುವ ತೊಂದರೆಯಿಂದಾಗಿ ಸಾರ್ವಜನಿಕರಿಗೆ ಉತ್ತಮ ಸೇವೆ ಲಭ್ಯವಾಗದೆ ತೊಂದರೆ ಅನುಭವಿಸುವಂತಾಗಿದೆ. ಸರ್ಕಾರ ನೇಮಿಸಿದ ಅಧಿಕಾರಿಗಳಲ್ಲಿರುವ ದ್ವಂದ್ವ ನೀತಿಯನ್ನು ಬಿಟ್ಟು ಸಮಾನ ರೀತಿಯ ವ್ಯವಸ್ಥೆಯನ್ನು ಸಮರ್ಪಕವಾಗಿ ಒದಗಿಸಿದರೆ, ಗ್ರಾಮಗಳಲ್ಲೂ ಕೂಡ ಉತ್ತಮ ಆರೋಗ್ಯಸ್ಥಿಯನ್ನು ಕಾಪಾಡಿಕೊಳ್ಳಬಹುದು.

ಈ ಲೇಖನವನ್ನು ಸಿದ್ಧಪಡಿಸಲು ಸೂಕ್ತ ಮಾರ್ಗದರ್ಶನ ನೀಡಿದ ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರಾದ ಡಾ. ಸಂಜಯಕುಮಾರ ಶಿ. ಹಾರೋಬಿಡಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

***



# ಭಾರತದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಖಾದಿಯ ಪಾತ್ರ



**ಶರಣಬಸವ ನಿಂಗಯ್ಯ ದಂಡಿನ**
ಬಿ.ಎ. ಗ್ರಾಮೀಣಾಭಿವೃದ್ಧಿ ಮತ್ತು
ಆಡಳಿತ ವಿಭಾಗ,
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

**ಪೀಠಿಕೆ :**

ದೇಶದ ಪ್ರಾಚೀನ ಕಾಲದಿಂದಲೂ ಸ್ವದೇಶೀಯತೆ ಎಂಬ ಪರಿಕಲ್ಪನೆಯನ್ನು ಆಧರಿಸಿ ಜೀವನ ನಡೆಸುತ್ತಾ ಬಂದಿವೆ. ಅದರಲ್ಲೂ ಗ್ರಾಮೀಣ ಜನರ ಆರ್ಥಿಕ ಕಸುಬು ಎಂದರೆ ಕೃಷಿ. ಕೃಷಿಯಲ್ಲಿಯೇ ತಮಗೆ ಬೇಕಾಗಿರುವ ಅಗತ್ಯ ಮೂಲಭೂತ ಕಚ್ಚಾ ವಸ್ತುಗಳನ್ನೆಲ್ಲ ತಾವೇ ತಯಾರಿಸಿಕೊಳ್ಳುತ್ತಿದ್ದರು. ಉದಾಹರಣೆ : ಹಿಂದೆ ಬೆಳೆದ ಹತ್ತಿಯನ್ನು ಶುದ್ಧಗೊಳಿಸಿ ಅದನ್ನು ನೂಲು ಮಾಡಿ ಕೈ ಮಗ್ಗದಿಂದ ಅಥವಾ ಚರಕದಿಂದ ಬಟ್ಟೆಯನ್ನು ತಯಾರಿಸಿಕೊಳ್ಳುತ್ತಿದ್ದರು. ಇದರಿಂದ ಅವರಿಗೆ ಹಣದ ಉಳಿತಾಯ ಜೊತೆಗೆ ಅವುಗಳ ಮಾರಾಟದಿಂದಲೂ ಲಾಭ ಬರುತ್ತಿತ್ತು. ಹಾಗಾಗಿ, ಪ್ರಸ್ತುತದಲ್ಲೂ ಭಾರತದ ಆರ್ಥಿಕತೆ ನಿಂತಿರುವುದೇ ಕೃಷಿಯಿಂದ. ಈ ಕೃಷಿ ಸಾಮಾಜಿಕ ಮತ್ತು ಆರ್ಥಿಕತೆಯ ಪರಿವರ್ತನೆಯಲ್ಲಿ ಸ್ವದೇಶಿಯತೆ ಮೂಲ ಖಾದಿ ಬಟ್ಟೆ ಎಂದರೆ ತಪ್ಪಾಗಲಾರದು, ಹೌದು ! ಭಾರತದ ರೈತ ಕಾರ್ಮಿಕರು ಇಂದಿಗೂ ಕೈಮಗ್ಗದಿಂದ ಅಥವಾ ಸಣ್ಣ ಕೈಗಾರಿಕೆಗಳಿಂದ ಖಾದಿ ಬಟ್ಟೆಯನ್ನು ತಯಾರಿಸುತ್ತಿದ್ದು, ಮಾರುಕಟ್ಟೆಯಲ್ಲಿ ಅವುಗಳ ಬೇಡಿಕೆ ಹೆಚ್ಚಾಗಿ, ಬೆಲೆಯೂ ಹೆಚ್ಚಾಗುತ್ತಿದೆ. ಇದರಿಂದ ಅವರ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯು ಸಹಜವಾಗಿ ಬದಲಾಗುತ್ತಿರುವುದು ದೇಶದ ಸಮೃದ್ಧಿ ಬೆಳವಣಿಗೆಯಲ್ಲಿ ಸಾಧ್ಯ ಎಂಬುದು ಸತ್ಯ ಅಲ್ಲವೇ? ಈ ದೆಸೆಯಲ್ಲಿ ಕೊಂಚ ಆಲೋಚಿಸೋಣ.

**ವಿಷಯ ವಿವರಣೆ :**

ಭಾರತೀಯ ಸ್ವದೇಶೀಯತೆಯು ಪುರಾತನವಾಗಿದ್ದು, ಸರ್ವವ್ಯಾಪಕವಾಗಿದೆ. ಏಕೆಂದರೆ ಪ್ರಸ್ತುತ ಸಮಕಾಲಿನಲ್ಲಿ ನಾವು ಸ್ವದೇಶೀಯತೆ ಎಂಬುದನ್ನು ಮರೆತು ಹೋಗಿ ಪಾಶ್ಚಿಮಾತ್ಯರ, ವಿದೇಶಿಗರ ಕೊಡುಗೆಗೆ ಮಾರು ಹೋಗಿದ್ದೇವೆ. ಹೀಗಾಗಿ, ನಾವು ನಮ್ಮತನ ಬಿಟ್ಟು ಇನ್ನೊಬ್ಬರ ಅಂಶಗಳನ್ನು ಅಳವಡಿಸಿಕೊಂಡಾಗ ನಮ್ಮತನಕ್ಕೆ ಬೆಲೆ ಇರುವುದಿಲ್ಲ! ಏಕೆಂದರೆ, ನಮ್ಮ ಸ್ವದೇಶೀಯತೆಯ ವಸ್ತುಗಳಿಗೆ ನಮಗೆ



ಹೆಮ್ಮೆ ಇರಬೇಕು ಅಂದಾಗ ಮಾತ್ರ ಅವುಗಳ ತಯಾರಿಕೆ, ಬೇಡಿಕೆ, ಪೂರೈಕೆ ತಾನಾಗಿಯೇ ಹೆಚ್ಚುತ್ತದೆ, ಆಗ ದೇಶದ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯು ಕಂಡಿತಾ ಸಾಧ್ಯವಾಗುತ್ತದೆ.

### ಹಿನ್ನೆಲೆ :

ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಯ ಪರಿವರ್ತನೆಯಲ್ಲಿ ಗಾಂಧೀಜಿ ದೃಷ್ಟಿಯಲ್ಲಿನ ಖಾದಿಯ ಪಾತ್ರ

ಸ್ವದೇಶೀಯ ತತ್ವಗಳಲ್ಲಿ ಸಮಾಜಕ್ಕೆ ಅವಶ್ಯಕ ಹಾಗೂ ಮಹತ್ವದ ಸಾಧನವೆಂದರೆ 'ಖಾದಿ' ಎಂಬುದನ್ನು ಗಾಂಧೀಜಿ ಮನಗಂಡಿದ್ದರು ಹಾಗೂ ಭಾರತದ ಕೋಟ್ಯಾಂತರ ಜನರಿಗೆ ನೆಮ್ಮದಿಯ ಬದುಕನ್ನು ಒದಗಿಸಬಲ್ಲ ಶಕ್ತಿ ಯಾವುದು ಎಂಬ ಸಮಸ್ಯೆಗೆ ಖಾದಿಯು ಮೂಲಕವೇ ಎಂದು ಕಂಡುಕೊಂಡರು. ಖಾದಿ ಪ್ರಚಾರವನ್ನು ಅವರು ಜೀವನದುದ್ದಕ್ಕೂ ಕೈಗೊಂಡರು. ಸಂಪೂರ್ಣ ಸ್ವದೇಶಿ ಉತ್ಪಾದನೆಯಾದ ಖಾದಿಯನ್ನು ಜನಪ್ರಿಯ ಗೊಳಿಸಿಸಲು ಅನೇಕ ಯೋಜನೆಗಳನ್ನು ನಿರೂಪಿಸಿದರು. ಖಾದಿ ಕೇಂದ್ರಗಳನ್ನು ತೆರೆದು ಲಕ್ಷಾಂತರ ಜನರಿಗೆ ಉದ್ಯೋಗ ದೊರಕಿಸಿಕೊಟ್ಟರು. ಸ್ವಾತಂತ್ರ ಹೋರಾಟಗಾರರಿಗೆ ಖಾದಿಯ ಉತ್ಪಾದನೆಯು ತಾರಕ ಮಂತ್ರವಾಯಿತು ಹಾಗೂ ಸ್ವದೇಶಿ ಚಳುವಳಿಯನ್ನು ಪ್ರಾರಂಭಿಸಲು ನೆರವಾಯಿತು.

'ಖಾದಿ' ಎಂಬ ಪದವನ್ನು 'ಖದ್ದರ್'ನಿಂದ ಪಡೆಯಲಾಗಿದೆ, ಇದು ಕೈಯಿಂದ ನೂಲುವ ಮತ್ತು ನೇಯ್ದ ನೈಸರ್ಗಿಕ ನಾರಿನ ಬಟ್ಟೆಯಾಗಿದ್ದು, ಮಹಾತ್ಮ ಗಾಂಧೀಜಿಯವರು ಸ್ವದೇಶಿ (ಸ್ವಾವಲಂಬನೆ) ಎಂಬುದಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರಚಾರ ಮಾಡಿದ್ದರು. ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳಲ್ಲಿ ಈ ಖಾದಿ ಎಂಬ ಪದವನ್ನು ಅತಿ ಹೆಚ್ಚು ಬಳಸಲಾಗುತ್ತಿತ್ತು.

ಖಾದಿಯನ್ನು ಕೈಯಿಂದ ನೇಯ್ದು ಬಟ್ಟೆಯ ಮೊದಲ ತುಂಡನ್ನು 1917–18ರ ಅವಧಿಯಲ್ಲಿ ಸಬರಮತಿ ಆಶ್ರಮದಲ್ಲಿ ತಯಾರಿಸಲಾಗುತ್ತಿತ್ತು. ಬಟ್ಟೆಯ ಒರಟುತನದಿಂದ ಗಾಂಧೀಜಿಯವರು ಅದನ್ನು 'ಖಾದಿ' ಎಂದು ಕರೆಯಲು ಕಾರಣವಾಯಿತು.

### ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಖಾದಿಯ ಪಾತ್ರ :

ಈ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಗ್ರಾಮೀಣ ಜನರ ಜೀವನವನ್ನು ಹಸನಗೊಳಿಸುವಲ್ಲಿ ಖಾದಿಯೂ ಇಂದಿಗೂ ಮೂಲ ಆದಿಯಾಗಿಯೂ ತನ್ನ ಪಾತ್ರವನ್ನು ವ್ಯಾಪಿಸಿದ್ದು, ಈ ಕೆಳಗಿನ ಅಂಶಗಳ ಮೂಲಕ ತಿಳಿಯಬಬುದಾಗಿದೆ.

1) ಗ್ರಾಮೀಣ ಸಂಪನ್ಮೂಲಗಳ ಗರಿಷ್ಠ ಉಪಯೋಗ: ಗ್ರಾಮೀಣ ಪ್ರದೇಶಗಳಲ್ಲಿ ಖಾದಿಯನ್ನೇ ಜೀವನಧಾರವಾಗಿಸಿಕೊಂಡು ಸಣ್ಣ ಉದ್ಯಮಿಗಳು ತಮಗೆ ಬೇಕಾಗಿರುವ ಕಚ್ಚಾ ಹತ್ತಿಯನ್ನೇ ತಾವೇ ಬೆಳೆದು ಅದರಿಂದ ಶುದ್ಧ ಖಾದಿ ಬಟ್ಟೆಯನ್ನು ತಯಾರಿಸಿ, ಮಾರಾಟ ಮಾಡುತಿದ್ದು, ಖಾದಿಯೂ ತಮ್ಮ ಸ್ಥಳೀಯ ಸಂಪನ್ಮೂಲಗಳ ಬಳಕೆಯ ಪರಿವರ್ತನೆಯಲ್ಲಿ ಮಹತ್ವದಾಗಿದೆ.
2) ಸೀಮಿತ ಬಂಡವಾಳ ಹೂಡಿಕೆ: ಜನರು ತಮಗೆ ಅನುಕೂಲವಾಗುವಷ್ಟು ಬಂಡವಾಳ ಹೂಡಿಕೆಮಾಡಿ, ಸಂಪನ್ಮೂಲಗಳನ್ನು ಬಳಸಿಕೊಂಡು ಹೆಚ್ಚಿನ ಖಾದಿ ಬಟ್ಟೆಯನ್ನು ತಯಾರಿಸಿ ಅದನ್ನು ಮಾರಾಟ ಮಾಡಿ ಹೆಚ್ಚಿನ ಆದಾಯವನ್ನು ತೆಗೆಯಬಹುದಾಗಿದೆ.
3) ಬಡವರು ವಲಸೆ ಹೋಗುವುದನ್ನು ತಡೆಯುವಿಕೆ: ಸ್ಥಳೀಯವಾಗಿ ಜನರು ವಲಸೆ ಹೋಗುವಿಕೆಯನ್ನು ತಡೆಯಲು ಖಾದಿ ಬಟ್ಟೆಯ ತಯಾರಿಕೆ ಘಟಕ ಸ್ಥಾಪಿಸಿಕೊಂಡು ಉತ್ಪಾದನೆ ಮಾಡಿ, ಅದರಲ್ಲಿ ಅನೇಕರಿಗೆ ಉದ್ಯೋಗ ನೀಡುವುದರ ಜೊತೆಗೆ ವಲಸೆ ಹೋಗುವುದನ್ನು ತಪ್ಪಿಸುವಲ್ಲಿ ಖಾದಿ ಪಾತ್ರ ವ್ಯಾಪಿಸಿದೆ.
4) ಸಣ್ಣ ಉದ್ಯಮಿಗಳ ಅಭಿವೃದ್ಧಿಗೆ ಸಹಾಯಕ: ಗ್ರಾಮಮಟ್ಟದಲ್ಲಿ ಸ್ಥಾಪನೆಯಾಗಿರುವ ಈ ಸಣ್ಣ ಉದ್ಯಮಿಗಳ ಖಾದಿ ಬಂಡಾರವನ್ನೇ ಜೀವನ ಆಧಾರವಾಗಿಸಿ, ಸ್ವ–ಸ್ಥಳದಲ್ಲಿ ಖಾದಿ ಬಟ್ಟೆಯನ್ನು ತಯಾರಿಸಿ, ಹೆಚ್ಚಿನ ಲಾಭಗಳಿಸು ವುದರಿಂದ ಖಾದಿಯು ಸಣ್ಣ ಉದ್ಯಮಿಗಳ ಅಭಿವೃದ್ಧಿಗೆ ಸಹಾಯಕವಾಗಿದೆ.
5) ಉದ್ಯೋಗ ಸೃಷ್ಟಿಸುವಲ್ಲಿ ಖಾದಿಯ ಪಾತ್ರ: ಪ್ರಸ್ತುತತೆಯಲ್ಲಿ ಅನೇಕ ನಿರುದ್ಯೋಗಿಗಳಿಗೆ ಖಾದಿಯೂ ಉದ್ಯೋಗ ಸೃಷ್ಟಿಸಿ ಅವರಿಗೆ ಉದ್ಯೋಗ ಒದಗಿಸುವಲ್ಲಿ ಬೆಳೆದು ನಿಂತಿದೆ, ಹೌದು! ಗ್ರಾಮೀಣ ಜನರು ತಮ್ಮ ಕರಕುಶಲತೆಯಿಂದ ಖಾದಿಯನ್ನು ನೇಯ್ದು ಬಟ್ಟೆಯನ್ನು ತಯಾರಿಸಿ, ಅನೇಕರಿಗೆ ಒದಗಿಸುವುದರೊಂದಿಗೆ ಲಾಭವನ್ನು ಪಡೆದು ದೇಶದ ಸಾಮಾಜಿಕ ಮತ್ತು ಆರ್ಥಿಕತೆ ಸುಧಾರಿಸುವಲ್ಲಿ ಖಾದಿ ಪಾತ್ರ ಪ್ರಮುಖವಾಗಿದೆ. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡು ಕೋಟ್ಯಾಂತರ ಜನರಿಗೆ ಉದ್ಯೋಗಗಳನ್ನು ದೊರಕಿಸಿ ದೇಶದ ಉಆಕ ದರ ಬೆಳವಣಿಗೆ 7% ರಿಂದ 8% ಕ್ಕೆ ಮುಟ್ಟಲು ಖಾದಿಯ ಪಾತ್ರ ಪ್ರಮುಖವಾಗಿದೆ.

**ಪ್ರಸ್ತುತ ಸಮಕಾಲಿನ ಸಂದರ್ಭದಲ್ಲಿ ದೇಶದ ಸಾಮಾಜಿಕ ಮತ್ತು ಆರ್ಥಿಕತೆಯ ಪರಿವರ್ತನೆಯಲ್ಲಿ ಖಾದಿಯ ಪಾತ್ರದ ಮಹತ್ವ :**

ಭಾರತವನ್ನು ನೈಸರ್ಗಿಕ ನಾರಿನ ಕಚ್ಚಾ ವಸ್ತುಗಳ ಲಭ್ಯತೆಯ ಆಧಾರದ ಮೇಲೆ ಬಟ್ಟೆ ತಯಾರಿಕೆಯ ಪುರಾತನ ಪರಂಪರೆಯನ್ನು ಹೊಂದಿದೆ. ಖಾದಿಯು ಪ್ರಸ್ತುತ ಸಮಕಾಲಿನಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಜವಳಿ ನೆಲೆಯು ಪಾಶ್ಚಿಮಾತ್ಯ ಪ್ರಪಂಚದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿ ಮಹತ್ವ ಪಡೆದಿದೆ.

1) **ಜೀವನದ ಪದ್ಧತಿಯಾಗಿ ಖಾದಿ :** ಭಾರತೀಯ ಉಡುಪುಗಳಲ್ಲಿ ಒಂದಾಗಿರುವ ಖಾದಿಯೂ ನಿತ್ಯ ಜೀವನ ಪದ್ಧತಿಗಳಲ್ಲಿ ಒಂದಾಗಿದೆ. ಪ್ರಸ್ತುತ ದಿನಗಳಲ್ಲೂ ಖಾದಿ ಬಟ್ಟೆಗಳಲ್ಲಿ ಜನಪ್ರಿಯ ಧೋತಿ, ಲುಂಗಿ, ಶರ್ಟ್, ಪಂಚೆ, ಕುರ್ತಾ ಮತ್ತು ಕೈಮಗ್ಗ ಸೀರೆಗಳಾಗಿ ಕೈಮಗ್ಗದ ಬಟ್ಟೆಗಳು, ರೂಮಾಲು ಇತ್ಯಾದಿಗಳನ್ನು ಉಡುಪಿನ ಪದ್ಧತಿಯಾಗಿ ಬಳಸುತ್ತಾರೆ.
2) **ಫ್ಯಾಶನ್ ಆಗಿ ಖಾದಿ :** ಪರಿಸರ ಸ್ನೇಹಿ ಮತ್ತು ನೈಸರ್ಗಿಕ ಮೂಲವನ್ನ ಪರಿಗಣಿಸಿ, ಗ್ರಾಹಕರ ಜಾಗೃತಿ ಮತ್ತು ಸುಸ್ಥಿರತೆಯ ಸ್ಥಿರವಾದ ಬೇಡಿಕೆಯಿಂದಾಗಿ ಜಾಗತಿಕ ಮಟ್ಟದಲ್ಲೂ ಖಾದಿಯೂ ನಿಂತಿದೆ. ಉದಾಹರಣೆ: ರಾಜಕೀಯ ನಾಯಕರು, ಉನ್ನತ ಹಂತದ ಅಧಿಕಾರಿಗಳು ಖಾದಿ ಬಟ್ಟೆಗಳನ್ನ ಧರಿಸುತ್ತಾರೆ. ಏಕೆಂದರೆ, ಅದು ಗೌರವ ಮತ್ತು ಶ್ರೀಮಂತಿಕೆಯನ್ನು ಸಂಕೇತಿಸುತ್ತದೆ. ಅದು ವಿಶಿಷ್ಟ ನೋಟವನ್ನು ನೀಡುತ್ತದೆ. ಆದ್ದರಿಂದ ಪ್ರಸ್ತುತದಲ್ಲಿ ಖಾದಿ ಬಟ್ಟೆಯನ್ನು ಎಲ್ಲರೂ ಫ್ಯಾಷನ್ ಆಗಿ ಬಳಸಲು ಪ್ರಾರಂಭಿಸಿದ್ದಾರೆ. ಇದು ಹೆಮ್ಮೆಪಡುವ ವಿಷಯವಲ್ಲವೇ?.
3) **ಸಾಮಾಜಿಕ ಮತ್ತು ಆರ್ಥಿಕತೆಯಲ್ಲಿ ಖಾದಿ :** ಪ್ರಸ್ತುತತೆಯಲ್ಲಿ ಖಾದಿಯೂ ಜನರ ಜೀವನ ಪದ್ಧತಿಯಾಗಿ ಫ್ಯಾಷನ್ ಆಗಿ ಬೆಳೆದಿರುವುದರಿಂದ, ಅದು ಸಾಮಾಜಿಕ ಮತ್ತು ಆರ್ಥಿಕತೆಯು ಬೆಳವಣಿಗೆಯನ್ನು ಸಾಧಿಸಿದೆ. ಈ ನಿಟ್ಟಿನಲ್ಲಿ ದೇಶದಲ್ಲಿ ವಿಶೇಷವಾಗಿ ಖಾದಿಯು (ಸ್ವದೇಶಿಯತೆ)ಗೆ ಹೆಚ್ಚು ಆಸಕ್ತಿ ತೋರಿದವರಲ್ಲಿ ಪ್ರಧಾನಮಂತ್ರಿಯಾದ, ಸನ್ಮಾನ್ಯ ಶ್ರೀ ನರೇಂದ್ರ ಮೋದಿಜೀ ಅವರು ಈ ಖಾದಿ ಬಟ್ಟೆಯನ್ನು ತಯಾರಿಸಲು ಮತ್ತು ಉತ್ಪಾದಿಸುವವರಿಗೆ ಹೆಚ್ಚಿನ ಸಬ್ಸಿಡಿ ಧನ ಸಹಾಯ ನೀಡಿ ಖಾದಿ ಮಳಿಗೆಗಳನ್ನು ತೆರೆದು, ಅದರಿಂದ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಖಾದಿಯ ಬಳಕೆಯನ್ನು ಉತ್ತೇಜಿಸಿದರು.

ಒಟ್ಟಿನಲ್ಲಿ ಹೇಳುವುದಾದರೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆ ಸಾಧಿಸುವ ಖಾದಿಯ ಪಾತ್ರವೂ ಮಹತ್ವದ್ದಾಗಿದ್ದು, ಈ ನಿಟ್ಟಿನಲ್ಲಿ ನಾವೆಲ್ಲರೂ ಪಾಶ್ಚಿಮಾತ್ಯರ ಉಡುಪಿನ ಬದಲಿಗೆ ನಮ್ಮ ದೇಶಿಯತೆಯ ಸಂಕೇತ ಖಾದಿಯನ್ನೇ ಬಳಸೋಣ. ಅಂದಾಗ ಮಾತ್ರ ನಮ್ಮತನಕ್ಕೆ ತಾನಾಗಿ ಬೆಲೆ ಬರುತ್ತದೆ ಆದ್ದರಿಂದ ನಾವೆಲ್ಲರೂ ಖಾದಿ ಬಟ್ಟೆಯನ್ನು ಉತ್ಪಾದಿಸೋಣ, ಅದನ್ನು ಜೀವನ ಉಡುಪಿನ ಪದ್ಧತಿಯಾಗಿಯೂ ಬಳಸುವುದರೊಂದಿಗೆ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ತರೋಣ; "ನನ್ನ ದೇಶದ ಖಾದಿ ಬಟ್ಟೆಯು ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ತರುವಂತಾಗಬೇಕೆಂಬುದೇ ನನ್ನಾಸೆ".

ಭಾರತದ ಸ್ವದೇಶೀಯ ಮೂಲವೇ
'ಖಾದಿಯ ಪಾತ್ರ'
ಸಿರಿಧಾನ್ಯಗಳ ಮೂಲವೇ
'ಆರೋಗ್ಯದ ಸೂತ್ರ'
ದೇಹದ ದರಿದ್ರತೆಯ ತೊರೆಯುವ ಮೂಲವೇ
'ಯೋಗ ತಂತ್ರ'
ಇವೆಲ್ಲವುಗಳಿಂದಲೇ ದೇಶದ ಸಾಮಾಜಿಕ
ಆರ್ಥಿಕಾಭಿವೃದ್ಧಿಯ ಮೂಲವೇ
'ವಿಶ್ವಗುರುವಿನ ಮಂತ್ರ.'

***



# ಸಸ್ಯ ಸಂಜೀವಿನಿ : "ಅರಿಶಿಣ"





**ಡಾ. ಲಿಂಗರಾಜು ನಿಡುವಣಿ**
ಉಪನ್ಯಾಸಕರು ಹಾಗೂ
ಸಂಯೋಜಕರು, ಸ್ಮೃತಿವನ
ಕ.ರಾ.ಗ್ರಾ. ಮತ್ತು ಪಂ. ರಾಜ್
ವಿಶ್ವವಿದ್ಯಾಲಯ, ಗದಗ

ವೈಜ್ಞಾನಿಕ ಹೆಸರು : Curcuma Longa
ಕುಟುಂಬ : Linn Zingiberaceae

**ಬಹುಭಾಷಾ ಹೆಸರುಗಳು :**

ಕನ್ನಡ : ಅರಿಶಿಣ
ಸಂಸ್ಕೃತ : ಹರಿದ್ರಾ
ಹಿಂದಿ : ಹಲ್ದಿ
ತುಳು : ಮಂಜೊಲ್
ಇಂಗ್ಲಿಷ್ : ಟರ್ಮರಿಕ್
ತಮಿಳು : ಮಂಜಲ

**ಪರ್ಯಾಯ ಪದಗಳು :**

ಹರಿದ್ರಾ, ಕಾಂಚನೀ, ಕ್ರಿಮಿಘ್ನಾ, ಯೋಷಿತಪ್ರಿಯಾ, ಗೌರೀ, ವರವರ್ಣಿನೀ, ಪೀತಾ, ಹರಿತಾ, ಜಯಂತೀ, ಹಟ್ಟಿ ವಿಲಾಸಿನಿ, ನಿಶಾ, ರಜನಿ

**ವರ್ಣನೆ :**

ಅರಿಶಿನವು ಪ್ರಪಂಚದಾದ್ಯಂತ ಪ್ರಸಿದ್ಧವಾಗಿದೆ. ಈ ಮೂಲಿಕೆ 6000 ವರ್ಷಗಳಿಂದ ಪ್ರತಿ ಭಾರತೀಯ ಅಡುಗೆ ಮನೆಯನ್ನು ಆಕ್ರಮಿಸಿಕೊಂಡಿದೆ ಮತ್ತು ಇದನ್ನು ಅಡುಗೆ ಮನೆಯ ರಾಜ ಎಂದು ಪರಿಗಣಿಸಲಾಗಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬಳಕೆಯಾಗುತ್ತಿದ್ದ ಒಂದು ಪ್ರಮುಖ ಮಸಾಲೆಯ ವಸ್ತು ಮತ್ತು ಔಷಧ ಸಸ್ಯ ಆಹಾರ ಮತ್ತು ಆರೋಗ್ಯದಲ್ಲಷ್ಟೆ ಅಲ್ಲ, ಧಾರ್ಮಿಕವಾಗಿಯೂ ಪೂಜಾ ಸಾಮಗ್ರಿಗಾಗಿ ಹಾಗೂ ಸೌಂದರ್ಯವರ್ಧಕವಾಗಿಯೂ ಇದನ್ನು ನಿತ್ಯ ಪ್ರತಿ ರುಚಿಯಲ್ಲಿ ಕಹಿಯಾಗಿರುವ ಇದು ಅನೇಕ ಉಪಯುಕ್ತ ಗುಣವನ್ನು ಹೊಂದಿ ದೇಹದ ಅಂಗಾಗಗಳ ಆರೋಗ್ಯ ಹಾಗೂ ರೋಗ ನಿರೋಧಕವಾಗಿ ಕೆಲಸ ಮಾಡುತ್ತದೆ. ಅರಿಶಿಣ ಒಂದು ಬಹುವಾರ್ಷಿಕ ಸಸ್ಯ. ಬಹುವಾರ್ಷಿಕವಾದ ಅರಿಶಿಣ ಒಂದರಿಂದ ಮೂರು ಮೀಟರ್

ಎತ್ತರಕ್ಕೆ ಬೆಳೆಯುತ್ತದೆ. ಎಲೆಯೂ ಒಂದು ಎರಡು ಮೀಟರ್‌ನಷ್ಟು ಉದ್ದವಾಗಿ ಬೆಳೆದು ವಾಸನೆಯನ್ನು ಬೀರುತ್ತದೆ. ಈ ಸಸ್ಯವು ಹಳದಿ ಬಣ್ಣದ ಹೂಗಳನ್ನು ಬಿಡುತ್ತದೆ.

**ವಿಧಗಳು**

- ಹರಿದ್ರಾ
- ದಾರುಹರಿದ್ರಾ
- ವನಹರಿದ್ರಾ
- ಆಮ್ರಗಂಧಿ ಹರಿದ್ರಾ

**ಉಪಯೋಗಗಳು :**

- ಹುರಿದ ಅರಿಶಿಣ ಚೂರ್ಣವನ್ನು ಜೇನಿನೊಂದಿಗೆ ತೆಗೆದುಕೊಳ್ಳುವುದರಿಂದ ಅಸ್ತಮಾ, ಹಾಗೂ ಕೆಮ್ಮು ರೋಗಕ್ಕೆ ಒಳ್ಳೆಯದು.
- ಶೀತ ನೆಗಡಿ ಇರುವಾಗ ಒಂದು ಲೋಟ ಬಿಸಿ ಹಾಲಿಗೆ ಒಂದು ಚಮಚ ಅರಿಶಿನ ಪುಡಿ ಹಾಗೂ ಬೆಲ್ಲ ಸೇರಿಸಿ ದಿನಕ್ಕೆ ಎರಡು ಬಾರಿ ಸೇವಿಸಬೇಕು.
- ಸಂಧಿವಾತ ನಿವಾರಣೆಗಾಗಿ ಅರಿಶಿನ ಚೂರ್ಣ ಮತ್ತು ಶುಂಠಿಯನ್ನು ಸಮಾನ ಭಾಗದಲ್ಲಿ ತೆಗೆದುಕೊಂಡು ಹಾಲಿನ ಜೊತೆಗೆ ಸೇವಿಸಬೇಕು.
- ಅರಿಶಿಣ ಹಾಗೂ ಶ್ರೀಗಂಧವನ್ನು ತೇಯ್ದು ಪ್ರತಿದಿನ ಮುಖಕ್ಕೆ ಹಚ್ಚಿಕೊಂಡರೆ ಮುಖವು ಕಾಂತಿಯುತವಾಗುತ್ತದೆ. ಮೊಡವೆ ಮತ್ತು ಕಲೆಗಳು ಇದರಿಂದ ಗುಣವಾಗುತ್ತವೆ.
- ಹರಳೆಣ್ಣೆಯಲ್ಲಿ ಅರಿಶಿನ ಪುಡಿಯನ್ನು ಕಲಿಸಿ ಬಿಸಿ ಮಾಡಿ ದಪ್ಪನಾದ ಕುರುಗಳಿಗೆ ಕಟ್ಟಬೇಕು. ದಿನದಲ್ಲಿ ಎರಡು ಬಾರಿ ಲೇಪನ ಮಾಡಿ ಕಟ್ಟುವುದರಿಂದ ಕುರುಗಳು ಒಡೆಯುತ್ತವೆ.
- ಹೃದಯ ನೋವಿನ ನಿವಾರಣೆಗಾಗಿ ಅರ್ಧ ಚಮಚ ಅರಿಶಿನ ಪುಡಿಗೆ ಒಂದು ಚಮಚ ಕಲ್ಲು ಸಕ್ಕರೆ ಸೇರಿಸಿ ನುಂಗಬೇಕು.
- ಅರಿಶಿಣ ಅತ್ಯುತ್ತಮ ರಕ್ತ ಶುದ್ಧೀಕರಣಕಾರಕ, ಇದು ಯಕೃತ್ತು ಮತ್ತು ರಕ್ತದಲ್ಲಿ ಸಂಗ್ರಹವಾದ ವಿಷವನ್ನು ಹೊರಹಾಕಲು ಸಹಾಯ ಮಾಡುತ್ತದೆ.
- ಈಗಲೂ ಮಕ್ಕಳು ಬಿದ್ದು ಗಾಯ ಮಾಡಿಕೊಂಡರೆ ಹಿರಿಯರು ಹಾಲಿಗೆ ಅರಿಶಿಣ ಪುಡಿಯನ್ನು ಸೇರಿಸಿ ಸೇವಿಸುವಂತೆ ಹೇಳುತ್ತಾರೆ. ಅರಿಷಿಣ ಗಾಯಗಳನ್ನು ಮಾಯಿಸುವ ಗುಣವನ್ನು ಹೊಂದಿದೆ ಮತ್ತು ಜೀವಕೋಶಗಳಿಗೆ ಉಂಟಾಗುವ ಹಾನಿಯನ್ನು ತಡೆಯುತ್ತದೆ.
- ಅರಿಶಿಣವನ್ನು ನಿಯಮಿತವಾಗಿ ಸೇವಿಸಿದಾಗ ಕರುಳಿನ ಜಂತುಗಳನ್ನು ನಿರ್ಮೂಲನೆ ಮಾಡಲು ಸಹಾಯ ಮಾಡುತ್ತದೆ ಮತ್ತು ದೇಹದ ಪ್ರತಿರಕ್ಷೆಯನ್ನು ಹೆಚ್ಚಿಸುತ್ತದೆ.
- ಅರಿಷಿಣ ಹಾಲು ಟೈಪ್–1 ಮಧುಮೇಹಿಗಳಲ್ಲಿ ರಕ್ತದಲ್ಲಿಯ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ನೆರವಾಗುತ್ತದೆ ಎನ್ನುವುದನ್ನು ವಿವಿಧ ಅಧ್ಯಯನಗಳು ತೋರಿಸಿವೆ. ಅದು ಕ್ಯಾನ್ಸರ್‌ಗೆ ಗುರಿಯಾಗುವ ಅಪಾಯವನ್ನೂ ಕಡಿಮೆ ಮಾಡುತ್ತದೆ.
- ಬೇರಿನ ಪುಡಿ ಮಾಡಿ ನೀರಿನಲ್ಲಿ ಕುದಿಸಿ ಆ ನೀರಿನಿಂದ ಕಣ್ಣನ್ನು ಒರೆಸಿದರೆ ಕೆಂಗಣ್ಣು ರೋಗವು ಗುಣವಾಗುತ್ತದೆ.
- ಹರಿದ್ರ ಚೂರ್ಣವನ್ನು ನೀರಿನಲ್ಲಿ ಬೆರೆಸಿ ಅದಕ್ಕೆ ಸ್ವಲ್ಪ ಪ್ರಮಾಣದ ಹುಣಸೆ ಎಲೆಯ ರಸವನ್ನು ಸೇರಿಸಿ ಕುಡಿಯುವುದರಿಂದ ಸಿಡುಬು ರೋಗಕ್ಕೆ ಒಳ್ಳೆಯದು.
- ಅರಿಶಿನವನ್ನು ತ್ರಿಫಲ ಚೂರ್ಣದೊಂದಿಗೆ ಬೆರೆಸಿ, ತುಪ್ಪ ಮತ್ತು ಜೇನನ್ನು ಸೇರಿಸಿ ಕುಡಿಯುವುದರಿಂದ ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ಒಳ್ಳೆಯದು.
- ಅರಿಶಿಣದ ಪುಡಿಯನ್ನು ಶುದ್ಧವಾದ ತುಪ್ಪ ಅಥವಾ ಎಣ್ಣೆಯಲ್ಲಿ ಸಮ ಪ್ರಮಾಣದಲ್ಲಿ ಬೆರೆಸಿ ಮುಲಾಮಿನಂತೆ ಮಾಡಿ ಗಾಯಗಳಿಗೆ ಹಚ್ಚುವುದರಿಂದ ಗಾಯಗಳು ಬೇಗ ಒಣಗುತ್ತವೆ.
- ಕಫಯುಕ್ತ ಕೆಮ್ಮಿನಲ್ಲಿ ಒಂದು ಲೋಟ ನೀರಿಗೆ ಕಾಲು ಚಮಚ ಅರಿಶಿಣದ ಪುಡಿ ಹಾಕಿ ಕುದಿಸಿ ಸ್ವಲ್ಪ ಬೆಲ್ಲ ಸೇರಿಸಿ ಕುಡಿಯಬೇಕು.

***

# ವಿಶ್ವವಿದ್ಯಾಲಯದ ಚಟುವಟಿಕೆಗಳು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಹಾಗೂ ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ. ಯವರ ನೇತೃತ್ವದಲ್ಲಿ ಹಲವಾರು ಶೈಕ್ಷಣಿಕ ಚಟುವಟಿಕೆಗಳು, ವಿಸ್ತರಣಾ ಚಟುವಟಿಕೆಗಳು ಹಾಗೂ ವಿಭಿನ್ನ ಕಾರ್ಯಕ್ರಮಗಳು ಜರುಗುತ್ತಿದ್ದು, ಅವುಗಳಲ್ಲಿ ಪ್ರಮುಖವಾದವುಗಳನ್ನು ಈಗಾಗಲೇ ಈ ಹಿಂದಿನ ಆವೃತ್ತಿಗಳಲ್ಲಿ ಬಿಂಬಿಸಲಾಗಿದೆ. ಎಂದಿನಂತೆ 2023 ರ ಜುಲೈನಿಂದ ಸೆಪ್ಟೆಂಬರ್ ತಿಂಗಳಲ್ಲಿ ಕೂಡ ಹಲವಾರು ವಿಶಿಷ್ಟವಾದ ಮತ್ತು ವಿಭಿನ್ನವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಅವುಗಳಲ್ಲಿ ಪ್ರಮುಖವಾದವುಗಳ ವಿವರ ಈ ಕೆಳಗಿನಂತಿದೆ.

## ವಿಶ್ವವಿದ್ಯಾಲಯದಲ್ಲಿ ರಿಮೋಟ್ ಸೆನ್ಸಿಂಗ್, ಜಿ.ಐ.ಎಸ್. ಲ್ಯಾಬ್‌ಗಳು, ಡೇಟಾ ಸೈನ್ಸ್ ಮತ್ತು ಡೇಟಾ ಪ್ರೊಸೆಸಿಂಗ್ ಕಂಪ್ಯೂಟರ್ ಲ್ಯಾಬ್‌ಗಳ ಉದ್ಘಾಟನೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ನಾಗಾವಿ, ಗದಗ ಆವರಣದಲ್ಲಿರುವ ಶಾಲಾ ಕಟ್ಟಡದಲ್ಲಿ ಗುರುಪೂರ್ಣಿಮೆಯ ದಿನದಂದು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರ ಅಧ್ಯಕ್ಷತೆಯಲ್ಲಿ ರಿಮೋಟ್ ಸೆನ್ಸಿಂಗ್, ಜಿ.ಐ.ಎಸ್. ಲ್ಯಾಬ್‌ಗಳು, ಡೇಟಾ ಸೈನ್ಸ್ ಮತ್ತು ಡೇಟಾ ಪ್ರೊಸೆಸಿಂಗ್ ಕಂಪ್ಯೂಟರ್ ಲ್ಯಾಬ್‌ಗಳ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಮಾನ್ಯ ಕುಲಾಧಿಪತಿಗಳಾದ ಪ್ರೊ. ಪಿ.ವಿ. ಕೃಷ್ಣ ಭಟ್ ಆಗಮಿಸಿದ್ದರು.





ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು,
ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಮಾನ್ಯ ಕುಲಾಧಿಪತಿಗಳಾದ ಪ್ರೊ. ಪಿ. ವಿ.ಕೃಷ್ಣ ಭಟ್ ಅವರೊಂದಿಗೆ
ರಿಮೋಟ್ ಸೆನ್ಸಿಂಗ್, ಜಿ.ಐ.ಎಸ್. ಲ್ಯಾಬ್‌ಗಳು, ಡೇಟಾ ಸೈನ್ಸ್ ಮತ್ತು
ಡೇಟಾ ಪ್ರೊಸೆಸಿಂಗ್ ಕಂಪ್ಯೂಟರ್ ಲ್ಯಾಬ್‌ಗಳನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ರವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ. ಯವರು ಉಪಸ್ಥಿತರಿದ್ದರು ಹಾಗೂ ಎಲ್ಲಾ ಅಧಿಕಾರಿಗಳು, ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

# ವಿಶ್ವವಿದ್ಯಾಲಯದಲ್ಲಿ "ಗುರು ಪೂರ್ಣಿಮಾ" ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ Internal Quality Assurance Cell (IQAC) ಕೋಶದ ವತಿಯಿಂದ "ಗುರು ಪೂರ್ಣಿಮಾ" ದಿನಾಚಣೆಯನ್ನು ವಿಶ್ವವಿದ್ಯಾಲಯ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ಶ್ರೀ ಮ.ನಿ.ಪ್ರ. ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳ, ಶ್ರೀ ಕ್ಷೇತ್ರ, ಮಣಕವಾಡ ಇವರ ದಿವ್ಯ ಸಾನಿಧ್ಯದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ವಹಿಸಿದ್ದು, ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಒಡಿಶಾ ಕೇಂದ್ರೀಯ ವಿಶ್ವವಿದ್ಯಾಲಯದ ಮಾನ್ಯ ಕುಲಾಧಿಪತಿಗಳಾದ ಪ್ರೊ. ಪಿ.ವಿ. ಕೃಷ್ಣ ಭಟ್ ಆಗಮಿಸಿದ್ದರು.





ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ರವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ.ಯವರು ಉಪಸ್ಥಿತರಿದ್ದರು ಹಾಗೂ ಎಲ್ಲಾ ಅಧಿಕಾರಿಗಳು, ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಭಾಗಿಯಾಗಿದ್ದರು.



# ವಿಶ್ವವಿದ್ಯಾಲಯದಲ್ಲಿ
# "ಗಾಂಧಿ ಚಿಂತನ – ಮಂಥನ ಹಾಗೂ ಸತ್ಸಂಗ" ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ವತಿಯಿಂದ "ಗಾಂಧಿ ಚಿಂತನ – ಮಂಥನ ಹಾಗೂ ಸತ್ಸಂಗ" ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ದಿನಾಂಕ 11–07–2023 ರಂದು ಭಜನೆ ಹಾಗೂ ಉಪನ್ಯಾಸದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ. ಯವರು, ಸಬರಮತಿ ಆಶ್ರಮದ ಸಂಚಾಲನಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

# ವಿಶ್ವವಿದ್ಯಾಲಯದಲ್ಲಿ ಚಂದ್ರಯಾನ–3, ಭಾರತದ ಮೂರನೇ ಲೂನರ್ ಎಕ್ಸ್‌ಪ್ಲೋರೇಷನ್ ಮಿಷನ್ ಲೈವ್ ಟೆಲಿಕಾಸ್ಟಿಂಗ್

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಜಿಯೋಇನ್‌ಫರ್ಮ್ಯಾಟಿಕ್ಸ್ ಮತ್ತು ಐಟಿ ಸೆಲ್ ವಿಭಾಗದ ವತಿಯಿಂದ ಚಂದ್ರಯಾನ–3, ಭಾರತದ ಮೂರನೇ ಲೂನರ್ ಎಕ್ಸ್‌ಪ್ಲೋರೇಷನ್ ಮಿಷನ್, ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಟೇಕಾಫ್ ಆದ ಲೈವ್ ಟೆಲಿಕಾಸ್ಟಿಂಗ್‌ನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು. ವಿಜ್ಞಾನಿಗಳ ಅವಿರತ ಪ್ರಯತ್ನಗಳಿಗಾಗಿ ಅಭಿನಂದನೆಗಳನ್ನು ಸಲ್ಲಿಸಲಾಯಿತು.





ವಿಶ್ವವಿದ್ಯಾಲಯದಲ್ಲಿ ಚಂದ್ರಯಾನ-3, ಭಾರತದ ಮೂರನೇ ಲೂನರ್ ಎಕ್ಸ್‌ಪ್ಲೋರೇಷನ್ ಮಿಷನ್ ಲೈವ್ ಟೆಲಿಕಾಸ್ಟಿಂಗ್‌ನ ವೀಕ್ಷಣೆ

## ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ "ದೀಕ್ಷಾರಂಭ ಕಾರ್ಯಕ್ರಮ"

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗವು 03 ಮತ್ತು 04 ಆಗಸ್ಟ್ 2023 ರಂದು ವಿಶ್ವವಿದ್ಯಾಲಯದ ಆವರಣದಲ್ಲಿರುವ ಕೌಸಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ "ದೀಕ್ಷಾರಂಭ ಕಾರ್ಯಕ್ರಮ-2023" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಪರಮ ಪೂಜ್ಯರಾದ ಶ್ರೀ ಪುನೀತ್ ಮಹಾರಾಜ್ ಸ್ವಾಮಿಗಳು, ರಾಮಕೃಷ್ಣ-ವಿವೇಕಾನಂದ ಆಶ್ರಮ, ಗದಗ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದ್ದು, ಮುಖ್ಯ ಅತಿಥಿಗಳಾಗಿ ಪ್ರೊ. ಟಿ. ಎಮ್. ಭಾಸ್ಕರ, ಮಾನ್ಯ ಕುಲಪತಿಗಳು, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ.ಯವರು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## ವಿಶ್ವವಿದ್ಯಾಲಯದಲ್ಲಿ ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ್ ಅವರ ಜನುಮದಿನದ ವಾರ್ಷಿಕೋತ್ಸವದಂದು "ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ" ಮತ್ತು ಗ್ರಂಥಾಲಯ ನಿರ್ವಹಣೆಯಲ್ಲಿ ಐಸಿಟಿಯ ಅನ್ವಯಗಳ ಅರಿವು ಕಾರ್ಯಕ್ರಮ

ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ ಅವರ ಜನುಮದಿನದ ವಾರ್ಷಿಕೋತ್ಸವದಂದು "ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ" ಮತ್ತು ಗ್ರಂಥಾಲಯ ನಿರ್ವಹಣೆಯಲ್ಲಿ ಐಸಿಟಿಯ ಅನ್ವಯಗಳ ಅರಿವು ಕಾರ್ಯಕ್ರಮವನ್ನು ದಿನಾಂಕ 11.08.2023 ರಂದು ನಾಗಾವಿಯ ಕೌಶಲ್ಯ ವಿಕಾಸ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಸಂಪನ್ಮೂಲವ್ಯಕ್ತಿಗಳಾಗಿ ಶ್ರೀ ವಸುದೇವ ದೇಶಪಾಂಡೆ, ಸಿ.ಇ.ಓ., ಈಜಿಲಿಬ್ ಸಾಫ್ಟ್‌ವೇರ್ ಪ್ರೈ.ಲಿ. ಬೆಂಗಳೂರು ಇವರು ಹಾಗೂ ಮುಖ್ಯ ಅತಿಥಿಗಳಾಗಿ ಪ್ರೊ. ರಮೇಶ ಆರ್. ನಾಯ್ಕ್, ಕಾರ್ಯದರ್ಶಿಗಳು, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ.ಯವರು, ಸಿಟಿ ಸೆಂಟ್ರಲ್ ಲೈಬ್ರರಿ ಕಾಲೇಜ್ ಧಾರವಾಡದ ಉಪನ್ಯಾಸಕರಾದ ಶ್ರೀ ಎಸ್. ವಿ. ಹಿರೇಮಠ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿಶ್ವವಿದ್ಯಾಲಯದಲ್ಲಿ
# "ಗಾಂಧಿ ಚಿಂತನ – ಮಂಥನ ಹಾಗೂ ಸತ್ಸಂಗ" ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವತಿಯಿಂದ "ಗಾಂಧಿ ಚಿಂತನ – ಮಂಥನ ಹಾಗೂ ಸತ್ಸಂಗ" ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ ದಿನಾಂಕ 11–08–2023 ರಂದು ಭಜನೆ ಹಾಗೂ ಉಪನ್ಯಾಸದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದು, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ.ಯವರು, ಸಬರಮತಿ ಆಶ್ರಮದ ಸಂಚಾಲನಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

# ವಿಶ್ವವಿದ್ಯಾಲಯದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಧ್ವಜಾರೋಹಣವನ್ನು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳು ಹಾಗೂ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ರವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ.ಯವರು, ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.





ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು
77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣವನ್ನು ನೆರವೇರಿಸಿದರು.

# ವಿಶ್ವವಿದ್ಯಾಲಯದಲ್ಲಿ ISAC – ISRO ದೊಂದಿಗೆ ಗುರುತಿಸಿಕೊಂಡಿರುವ ಖ್ಯಾತ ವಿಜ್ಞಾನಿ ಶ್ರೀ ಸುಧೀಂದ್ರ ಬಿಂದಗಿ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಆಗಸ್ಟ್ 30, 2023 ರಂದು ISAC – ISRO ದೊಂದಿಗೆ ಗುರುತಿಸಿಕೊಂಡಿರುವ ಖ್ಯಾತ ವಿಜ್ಞಾನಿ ಶ್ರೀ ಸುಧೀಂದ್ರ ಬಿಂದಗಿ ಅವರನ್ನು ಗೌರವಿಸಲು ಗಮನಾರ್ಹವಾದ ಸನ್ಮಾನ ಕಾರ್ಯಕ್ರಮವನ್ನು ಹೆಮ್ಮೆಯಿಂದ ಆಯೋಜಿಸಲಾಗಿತ್ತು. ಪ್ರಖ್ಯಾತ ವಿಜ್ಞಾನಿ ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವಿನ ಆಕರ್ಷಕ ಸಂವಾದವು ಕಾರ್ಯಕ್ರಮದ ಮೆರುಗನ್ನು ಇಮ್ಮಡಿಗೊಳಿಸಿತು.



*ISAC – ISRO* ದೊಂದಿಗೆ ಗುರುತಿಸಿಕೊಂಡಿರುವ ಖ್ಯಾತ ವಿಜ್ಞಾನಿ ಶ್ರೀ ಸುಧೀಂದ್ರ ಬಿಂದಗಿ ಅವರಿಗೆ ಸನ್ಮಾನ

ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಪ್ರಾಸ್ತಾವಿಕ ಮಾತುಗಳನ್ನಾ ಡುತ್ತಾ, ಬಾಹ್ಯಾಕಾಶ ತಂತ್ರಜ್ಞಾನ ನೀಡುವ ನಾನಾ ಅವಕಾಶಗಳ ಕುರಿತು ವಿವರಿಸುತ್ತಾ ಚಂದ್ರಯಾನ 3 ಮಿಷನ್ ಕುರಿತಾದ ನಮ್ಮ ದೈನಂದಿನ ಜೀವನದಲ್ಲಿ ಪ್ರಾಯೋಗಿಕ ಅನ್ವಯಗಳು ಚರ್ಚೆಗೆ ವೇದಿಕೆ ಸಿದ್ಧಪಡಿಸಿದರು. ISAC - ISRO ದ ನಿವೃತ್ತ ಥರ್ಮಲ್ ಗ್ರೂಪ್ ನಿರ್ದೇಶಕ ಮತ್ತು ಚಂದ್ರಯಾನ 3 ರ ಥರ್ಮಲ್ ಡಿಸೈನ್ ವಿಭಾಗದ ಪ್ರಮುಖ ವ್ಯಕ್ತಿ ಶ್ರೀ ಸುಧೀಂದ್ರ ಬಿಂದಗಿ ಮುಖ್ಯ ಅತಿಥಿಯಾಗಿ ಆಗಮಿಸಿ, ತಮ್ಮ ಭಾಷಣದಲ್ಲಿ, ಅವರು ಚಂದ್ರಯಾನ 3 ಮಿಷನ್ ಸವಾಲುಗಳು, ಯಶಸ್ಸುಗಳು ಮತ್ತು ತಾಂತ್ರಿಕ ಪ್ರಗತಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು. ಅವರು ದೈನಂದಿನ ಜೀವನದಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ವ್ಯಾಪಕವಾದ ಅನ್ವಯಗಳ ಮೇಲೆ ಬೆಳಕು ಚೆಲ್ಲಿದರು, ಅವರ ಜ್ಞಾನ ಹಾಗೂ ವಿಚಾರಗಳು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಪ್ರೇರೇಪಿಸಿತು.





ವಿಶ್ವವಿದ್ಯಾಲಯದಲ್ಲಿ ಭಾರತದ ಚೊಚ್ಚಲ ಸೌರ ಮಿಷನ್, ಆದಿತ್ಯ-ಎಲ್ 1ರ ಲೈವ್ ಟೆಲಿಕಾಸ್ಟಿಂಗ್‌ನ ವೀಕ್ಷಣೆ

## ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ದಿನಾಂಕ 15.09.2023 ರಂದು ಆಚರಿಸಲಾಯಿತು. ಪ್ರಜಾಪ್ರಭುತ್ವವನ್ನು ಬಲಪಡಿಸಲು ಮತ್ತು ಅದರ ಮೌಲ್ಯಗಳು ಮತ್ತು ತತ್ವಗಳನ್ನು ಎತ್ತಿ ಹಿಡಿಯಲು 2007 ರಿಂದ ಇಲ್ಲಿಯವರೆಗೆ ವಿಶ್ವಸಂಸ್ಥೆಯು ಪ್ರತಿ ವರ್ಷ ಸೆಪ್ಟೆಂಬರ್ 15 ರಂದು ಪ್ರಜಾಪ್ರಬುತ್ವ ದಿನವನ್ನು ಆಚರಿಸಲಾಗುತ್ತಿದೆ. ಪ್ರಜಾಪ್ರಭುತ್ವವು ಒಂದು ದೇಶದ ಎಲ್ಲಾ ನಾಗರಿಕರ

ಸಮಾನ ಭಾಗವಹಿಸುವಿಕೆಯೊಂದಿಗೆ ಕಾರ್ಯನಿರ್ವಹಿಸುವ ಸರ್ಕಾರದ ಒಂದು ರೂಪವಾಗಿದೆ. ನಾಗರಿಕರ ಹಕ್ಕುಗಳ ಸಂರಕ್ಷಣೆ ಮತ್ತು ಆಚರಣೆಗೆ ಸಂವಿಧಾನವು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ನಮ್ಮ ದೇಶದ ಸಂವಿಧಾನ ಪೂರ್ವ ಪೀಠಿಕೆಯನ್ನು ಪಠಣ ಮಾಡುವ ಮೂಲಕ ಈ ದಿನವನ್ನು ಆಚರಿಸಲು ಕರೆ ನೀಡಲಾಗಿತ್ತು.



ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಆಚರಣೆ

## ವಿಶ್ವವಿದ್ಯಾಲಯದಲ್ಲಿ ಕೃಷಿ ಆಶ್ರಮದ ಭೂಮಿ ಪೂಜಾ ಹಾಗೂ ಭೋಜನ ಭವನ ಮತ್ತು ಶಾಲಾ ಕಟ್ಟಡದಲ್ಲಿ ಅಳವಡಿಸಲಾಗಿರುವ ಚಪಾತಿ ತಯಾರಿಕೆ ಮತ್ತು ಬೇಕರಿ ಪರಿಕರಗಳ ಉದ್ಘಾಟನೆ

ವಿಶ್ವವಿದ್ಯಾಲಯದಲ್ಲಿ ದಿನಾಂಕ 15.09.2023ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸ್ಮೃತಿ ವನ ಆವರಣದಲ್ಲಿ ಕೃಷಿ ಆಶ್ರಮದ ಭೂಮಿ ಪೂಜಾ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಂದ ನೆರವೇರಿಸಲಾಯಿತು. ಹಾಗೆಯೇ, ವಿಶ್ವವಿದ್ಯಾಲಯದ ಆವರಣದಲ್ಲಿರುವ ಭೋಜನ ಭವನ ಮತ್ತು ಶಾಲಾ ಕಟ್ಟಡದಲ್ಲಿ ಅಳವಡಿಸಲಾಗಿರುವ ಚಪಾತಿ ತಯಾರಿಕೆ ಮತ್ತು ಬೇಕರಿ ಪರಿಕರಗಳನ್ನು ಮಾನ್ಯ ಕುಲಪತಿಗಳು ಉದ್ಘಾಟಿಸಿದರು. ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ಹಾಗೂ ಎಲ್ಲಾ ಅಧಿಕಾರಿಗಳು, ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.



ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರಿಂದ ವಿಶ್ವವಿದ್ಯಾಲಯದ ಸ್ಮೃತಿ ವನ ಆವರಣದಲ್ಲಿ ಕೃಷಿ ಆಶ್ರಮದ ಭೂಮಿ ಪೂಜಾವನ್ನು ನೆರವೇರಿಸಿ, ಭೋಜನ ಭವನ ಮತ್ತು ಶಾಲಾ ಕಟ್ಟಡದಲ್ಲಿ ಅಳವಡಿಸಲಾಗಿರುವ ಚಪಾತಿ ತಯಾರಿಕೆ ಮತ್ತು ಬೇಕರಿ ಪರಿಕರಗಳನ್ನು ಉದ್ಘಾಟಿಸಲಾಯಿತು.

# ವಿಶ್ವವಿದ್ಯಾಲಯದಲ್ಲಿ ವಿಶ್ವ ಬಿದಿರು ದಿನಾಚರಣೆಯ ಆಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯದಲ್ಲಿ ವಿಶ್ವ ಬಿದಿರು ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ವಿಶ್ವವಿದ್ಯಾಲಯದ ಆವರಣದಲ್ಲಿ ಬಿದಿರು ಗಿಡಗಳನ್ನು ನೆಡಲಾಯಿತು. ಈ ಕಾರ್ಯಕ್ರಮವು ಸುಸ್ಥಿರತೆ, ಪರಿಸರ ಜಾಗೃತಿಗೆ ಕೊಡುಗೆ ಮತ್ತು ಆವರಣದಲ್ಲಿ ಯೋಗಕ್ಷೇಮಕ್ಕೆ ಬದ್ಧತೆಯನ್ನು ಸಂಕೇತಿಸುತ್ತದೆ.





ವಿಶ್ವವಿದ್ಯಾಲಯದಲ್ಲಿ ವಿಶ್ವ ಬಿದಿರು ದಿನಾಚರಣೆಯ ಆಚರಣೆ

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ದೀಪಿಕ ಬಾಜ್‌ಪೈ, ಅರಣ್ಯ ಉಪ ಸಂರಕ್ಷಣಾಧಿಕಾರಿಗಳು, ಗದಗ ಜಿಲ್ಲೆ, ಗದಗ ಇವರು ಆಗಮಿಸಿದ್ದು, ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ವಹಿಸಿದ್ದರು. ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ.ಯವರು, ಶ್ರೀಮತಿ ನಾಗರತ್ನ ಟಿ. ಎಂ. ಕಾರ್ಯನಿರ್ವಾಹಕ ಅಭಿಂತರರು, ಶ್ರೀ ಗಿರೀಶ್ ದೀಕ್ಷಿತ್, ಸಹಾಯಕ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನ ಕೇಂದ್ರ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ವಿಶ್ವವಿದ್ಯಾಲಯದಲ್ಲಿ ಸ್ವಗ್ರಾಮ್ ಫಲೋಶಿಪ್‌ನ ಎರಡನೇ ತ್ರೈಮಾಸಿಕ ಪ್ರಗತಿ ಅವಲೋಕನ ಮತ್ತು ಯೋಜನಾ ಸಭೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ, ಯೂತ್ ಫಾರ್ ಸೇವಾ ಬೆಂಗಳೂರು, ಪ್ರಜ್ಞಾ ಪ್ರವಾಹ ಕರ್ನಾಟಕ, ಚಾಣಕ್ಯ ವಿಶ್ವವಿದ್ಯಾಲಯ ಬೆಂಗಳೂರು, ಅಬ್ದುಲ್ ನಜೀರ್ ಸಾಬ್ ಅಧ್ಯಯನ ಪೀಠ, ಕುವೆಂಪು ವಿಶ್ವಿವಿದ್ಯಾಲಯ ಶಿವಮೊಗ್ಗ ಇವರ ಸಂಯುಕ್ತಾಶ್ರಯದಲ್ಲಿ ಪ್ರಾರಂಭಿಸಲಾದ, ಸ್ವಗ್ರಾಮ ಫೆಲೋಶಿಪ್‌ನ 2ನೇ ತ್ರೈಮಾಸಿಕ ಪ್ರಗತಿ ಅವಲೋಕನ ಮತ್ತು ಯೋಜನಾ ಸಭೆಯನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ. ರಾಜೇಂದ್ರ ಹೆಗಡೆ, ಕಾರ್ಯಕ್ರಮ ಸಂಯೋಜಕರು, ಇನೀಷಿಯೇಟಿವ್ಸ್ ಡೆವಲಪ್ಮೆಂಟ್ ಫೌಂಡೇಶನ್, ಬೆಂಗಳೂರು ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ವಿತ್ತಾಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ. ಅವರು ಹಾಗೂ ಶ್ರೀ ವೆಂಕಟೇಶ ಮೂರ್ತಿ ಸ್ಥಾಪಕರು ಮತ್ತು ಮುಖ್ಯ ಮಾರ್ಗದರ್ಶಕರು, ಯೂತ್ ಫಾರ್ ಸೇವಾ, ಬೆಂಗಳೂರು, ಪ್ರೊ. ಎಂ.ಎಸ್. ಚೈತ್ರ ಸಹಪ್ರಾಧ್ಯಾಪಕರು, ಚಾಣಕ್ಯ ವಿಶ್ವವಿದ್ಯಾಲಯ, ಬೆಂಗಳೂರು, ಡಾ. ಪ್ರಕಾಶ್ ಭಟ್ ನಿರ್ದೇಶಕರು (ಪ್ರಭಾರ), ಸಂಶೋಧನೆ, ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ, ಕ.ರಾ.ಗ್ರಾ. ಮತ್ತು ಪಂ.ರಾಜ್ ವಿಶ್ವವಿದ್ಯಾಲಯ, ಪ್ರೊ. ಷಣ್ಮುಕ ಎ ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಪೀಠ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಡಾ. ನಿರಂಜನ ಪೂಜಾರ ಸಂಯೋಜಕರು, ಪ್ರಜ್ಞಾ ಪ್ರವಾಹ, ಕರ್ನಾಟಕ ಇವರುಗಳು ಉಪಸ್ಥಿತರಿದ್ದರು. ಸ್ವಗ್ರಾಮ ಫೆಲೋಶಿಪ್ ನ ಸಲಹೆಗಾರರಾದ ಡಾ. ತಿಪ್ಪೇಸ್ವಾಮಿ ಕೆ.ಟಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

# ಕರ್ನಾಟಕದಲ್ಲಿ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಬಲವರ್ಧನೆಗಾಗಿ ದುಂಡು ಮೇಜಿನ ಸಮ್ಮೇಳನ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಕರ್ನಾಟಕ ಪಂಚಾಯತ್ ರಾಜ್ ಪರಿಷತ್, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಹಯೋಗದೊಂದಿಗೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಬಲವರ್ಧನೆಗಾಗಿ ದಿನಾಂಕ 26.09.2023 ಹಾಗೂ 27.09.2023 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ದುಂಡು ಮೇಜಿನ ಸಮ್ಮೇಳನವನ್ನು ನಡೆಸಲಾಯಿತು.




ಕರ್ನಾಟಕದಲ್ಲಿ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಬಲವರ್ಧನೆಗಾಗಿ ಬೆಂಗಳೂರಿನ ಗಾಂಧಿಭವನದಲ್ಲಿ ದುಂಡು ಮೇಜಿನ ಸಮ್ಮೇಳನ

ಕಾರ್ಯಕ್ರಮದಲ್ಲಿ ಶ್ರೀ ಪ್ರಿಯಾಂಕ್ ಖರ್ಗೆ, ಮಾನ್ಯ ಸಚಿವರು, ಐಟಿ ಬಿಟಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಡಾ. ಎಚ್. ಕೆ. ಪಾಟೀಲ್ ಮಾನ್ಯ ಕಾನೂನು ಸಚಿವರು, ಶ್ರೀ ಬಸವರಾಜ್ ಹೊರಟ್ಟಿ, ಸಭಾಪತಿಗಳು, ವಿಧಾನ ಪರಿಷತ್, ಶ್ರೀ ಶರಣ ಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು, ಶ್ರೀ ಮಣಿಶಂಕರ್ ಅಯ್ಯರ್, ಮಾಜಿ ಕೇಂದ್ರ ಸಚಿವರು, ಶ್ರೀ ಡಿ. ಆರ್. ಪಾಟೀಲ್, ಮಾಜಿ ಸಚಿವರು, ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ವಿಶ್ವವಿದ್ಯಾಲಯದ ಕುಲಪತಿಗಳು, ಶ್ರೀಮತಿ ಉಮಾ ಮಹದೇವನ್, ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಡಾ. ಎಸ್.ಎಸ್. ಮೀನಾಕ್ಷಿಸುಂದರಂ, ಐಎಎಸ್ (ನಿವೃತ್ತ), ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿನ ಸದಸ್ಯರು ಹಾಗೂ ಮತ್ತಿತರರು ಸಮಾವೇಶದಲ್ಲಿ ಉಪಸ್ಥಿತರಿದ್ದರು.

# ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ ಸಹಯೋಗದಲ್ಲಿ ವಿಶ್ವವಿದ್ಯಾಲಯದಲ್ಲಿ "ಕ್ರೀಡೋತ್ಸವ–2023" ಹಮ್ಮಿಕೊಂಡಿದ್ದು, 6ನೇ ಅಥ್ಲೇಟಿಕ್ ಕ್ರಿಡಾಕೂಟ ಹಾಗೂ ಕ್ರಿಕೆಟ್, ವಾಲ್ಲಿಬಾಲ್, ಖೋ–ಖೋ, ಕಬಡ್ಡಿ, ಬಾಸ್ಕೆಟ್‌ಬಾಲ್, ಫುಟ್‌ಬಾಲ್, ಬ್ಯಾಡ್ಮಿಟನ್ ಮತ್ತು ಟೇಬಲ್ ಟೆನ್ನಿಸ್ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಹೇಶ್ವರಿ ಉದಗಟ್ಟಿ ಅಂತರಾಷ್ಟ್ರೀಯ ಕ್ರೀಡಾಪಟು ಹಾಗೂ ದೈಹಿಕ ಶಿಕ್ಷಣದ ನಿರ್ದೇಶಕರು, ಎಸ್.ಜೆ.ಎಂ.ವ್ಹಿ.ಎಸ್. ಮಹಿಳಾ ಮಹಾವಿದ್ಯಾಲಯ, ಹುಬ್ಬಳ್ಳಿ ಇವರು ಆಗಮಿಸಿದ್ದು, ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಅಧ್ಯಕ್ಷತೆಯನ್ನು ವಹಿಸಿದ್ದರು ಹಾಗೂ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು, ಹಣಕಾಸು ಅಧಿಕಾರಿಗಳಾದ ಶ್ರೀ ಪ್ರಶಾಂತ ಜೆ.ಸಿ. ಯವರು ಉಪಸ್ಥಿತರಿದ್ದರು.

# Courses offered in the Uninversity

## POST GRADUATE PROGRAMMES

| Programme | Degree |
|---|---|
| Economics (Development Economics)<br>Cell : 8792734641 | M.A. |
| Computer Science (Data Analytics)<br>Cell : 9980205502 | M.Sc. |
| Geoinformatics (Remote Sensing & GIS)<br>Cell : 7892251362 | M.Sc. |
| Community Development (Rural Reconstruction) / Community Health<br>Cell : 8217721324 | M.S.W. |
| Master of Public Health<br>Cell : 9902591021 | M.P.H. |
| Food Science and Technology<br>Cell : 9880106636 | M.Sc. |
| Public Administration<br>Cell : 8095451616 | M.A. |
| Rural Management / Agribusiness Management<br>Cell : 7829864257 | M.B.A. |
| Rural Development & Panchayat Raj<br>Cell : 9448056077 | M.A. |
| Entrepreneurship / Co-operative management<br>Cell : 9844456930 | M.Com. |

Admissions for the Post Graduate Programs as per National Education Policy 2020 and Guidelines of UGC and Government of Karnataka.

## UNDER GRADUATE PROGRAMMES

**B.A.** HONORS
Rural Development and Political Science
Cell : 9481191881

**B.Sc.** HONORS
Public Health and Social Work
Cell : 9980791212

**B.Sc.** HONORS
Geoinformatics and Computer Science
Cell : 9742111458

**B.Sc.** HONORS
Agribusiness and Food Processing
Cell : 9164582650

**B.Com.** HONORS
Innovation and Start-Ups
Cell : 8147118966


## DIPLOMA PROGRAMMES

**P.G. Diploma**
Geoinformatics (GIS & RS)
Cell : 7892251362


**Diploma**
Gandhian Thought and Action
Cell : 7353467453

**Diploma**
Co-operation and Banking Management
Cell : 9632062466

Proposed School Building - 2



## ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



**ಭಾರತದ ಭವಿಷ್ಯವು ಹಳ್ಳಿಗಳಲ್ಲಿ ಅಡಗಿದೆ**

- ಮಹಾತ್ಮಾ ಗಾಂಧೀ




**ಪ್ರಕಾಶಕರು**

**ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ

ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ–582101, ಕರ್ನಾಟಕ, ಭಾರತ

(ಪ್ರಾದೇಶಿಕ ಕಛೇರಿ : ಗ್ರಾಮೀಣಾಭಿವೃದ್ಧಿ ಭವನ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು)

ಪೊ : (08372) 297214 ವೆಬಸೈಟ್ : www.ksrdpru.ac.in